ಬೆಲೆ ರೂ.2.50
D.O.P - 15th of every month at Udupi Sorting Office

Smt. Nagaveni Ullas
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**

"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ


ಮಾಸಪತ್ರಿಕೆ - 15 ಜನವರಿ 2015

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-15 ಸಂಚಿಕೆ-1 ಪುಟಗಳು-8 Registered Under No. UDP/1260/2015-2017

# ಶೃಂಗೇರಿ ಶ್ರೀಶಾರದಾ ಪೀಠಕ್ಕೆ ಉತ್ತರಾಧಿಕಾರಿ ಆಯ್ಕೆ



**ಶ್ರೀ ಶಾರದಾ ಪೀಠದ 37ನೇ ಪೀಠಾಧಿಪತಿಯನ್ನಾಗಿ ಕುಪ್ಪೂರು ವೆಂಕಟೇಶ್ವರಪ್ರಸಾದ ಶರ್ಮ (25) ಅವರನ್ನು ಇತ್ತೀಚೆಗೆ ಘೋಷಣೆ ಮಾಡಲಾಗಿದೆ.**

ಜಗದ್ಗುರು ಭಾರತೀತೀರ್ಥ ಸ್ವಾಮೀಜಿಯವರ ಪೀಠಾರೋಹಣದ ರಜತ ಮಹೋತ್ಸವದ ಅಂಗವಾಗಿ ನಡೆದ ಗುರುವಂದನಾ ಸಭೆಯಲ್ಲಿ ಶ್ರೀಮಠದ ಉತ್ತರಾಧಿಕಾರಿಗಳನ್ನು ಘೋಷಿಸಲಾಯಿತು.

ಸಭೆಯಲ್ಲಿ ಅನುಗ್ರಹ ಭಾಷಣ ಮಾಡಿದ ಭಾರತೀತೀರ್ಥರು, 37ನೇ ಪೀಠಾಧಿಪತಿಯನ್ನಾಗಿ ಕುಪ್ಪೂರು ವೆಂಕಟೇಶ್ವರಪ್ರಸಾದ ಶರ್ಮರನ್ನು ತಾವು ಆಯ್ಕೆ ಮಾಡಿದ್ದು ಅವರಿಗೆ ಜ.22 ಮತ್ತು 23ರಂದು ಸನ್ಯಾಸತ್ವ ನೀಡುವುದಾಗಿ (ಶಿಷ್ಯ ಪರಿಗ್ರಹ) ಹೇಳಿದರು.

ಶ್ರೀಮಠದಲ್ಲಿ ಗುರು-ಶಿಷ್ಯ ಪರಂಪರೆಗೆ ಅತ್ಯಂತ ಉನ್ನತ ಸ್ಥಾನವಿದೆ. 40 ವರ್ಷಗಳ ಹಿಂದೆ ತಾವು ಶಿಷ್ಯತ್ವ ಸ್ವೀಕರಿಸಿದಂತೆ ಇದೀಗ ತಮಗೆ ಶಿಷ್ಯ ಪರಿಗ್ರಹ ನೀಡುವ ಅವಕಾಶ ಒದಗಿ ಬಂದಿದೆ. ಎಲ್ಲ ಸದ್ಗುಣಗಳನ್ನು ಹೊಂದಿರುವ ಶಿಷ್ಯನನ್ನು ಆಯ್ಕೆ ಮಾಡಿದ್ದು, 5-6 ವರ್ಷಗಳಿಂದ ಶಾಸ್ತ್ರಾಭ್ಯಾಸ ನೀಡುತ್ತಿದ್ದೇವೆ ಎಂದು ತಿಳಿಸಿದರು.

ತಮಗೆ 64 ವರ್ಷವಾಗಿದ್ದು ತಮ್ಮ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ಜಗದಂಬೆ ಶ್ರೀ ಶಾರದೆ ನಮಗೆ ನೆನಪಿಸಿದ್ದಾರೆ. ತಮ್ಮ ಆಯ್ಕೆಗೆ ಶಾರದೆಯ ಅನುಗ್ರಹ ಸಿಗಲಿದೆ. ಈ ಸಮಾರಂಭಕ್ಕೆ ಬಂದವರೆಲ್ಲರೂ ಶಿಷ್ಯ ಪರಿಗ್ರಹ ಕಾರ್ಯಕ್ರಮದಲ್ಲಿಯೂ ಪಾಲ್ಗೊಳ್ಳಬೇಕೆಂಬ ಉದ್ದೇಶದಿಂದ ಉತ್ತರಾಧಿಕಾರಿ ಘೋಷಿಸಿದ್ದೇವೆ ಎಂದರು.

## ಕುಪ್ಪೂರು ವೆಂಕಟೇಶ್ವರಪ್ರಸಾದ ಶರ್ಮ



**21 ವರ್ಷದ ಯುವಕರಾದ ವೆಂಕಟೇಶ್ವರ ಪ್ರಸಾದ್ ಜ್ಞಾನದ ಖಣಿಯೇ ಎಂದರೆ ಅತಿಶಯೋಕ್ತಿಯಲ್ಲ. ತೀರಾ ಮಿತಭಾಷಿಯಾಗಿರುವ ಅವರು ಸದಾ ಅಧ್ಯಯನದಲ್ಲಿ ನಿರತರು. ಶಾರದಾ ಪೀಠದಲ್ಲಿ ಪಂಡಿತರ ದೊಡ್ಡ ಸಮೂಹವೇ ಇದ್ದರೂ ವೆಂಕಟೇಶ್ವರಪ್ರಸಾದ್ ಅವರಿಗೆ ಶ್ರೀ ಭಾರತೀತೀರ್ಥ ಸ್ವಾಮೀಜಿಗಳೇ ವೈಯಕ್ತಿಕವಾಗಿ ಪಾಠ ಮಾಡುತ್ತಿರುವುದು ಮತ್ತೊಂದು ವಿಶೇಷ.**

**ಅವರಲ್ಲಿನ ಅಗಾಧ ಪಾಂಡಿತ್ಯ, ಅಧ್ಯಯನಶೀಲತೆ, ಪ್ರತಿಭೆ, ಸಾತ್ವಿಕತೆ ಹಾಗೂ ಅವರಲ್ಲಿ ಸುಪ್ತವಾಗಿದ್ದ ಪ್ರತಿಭೆಯನ್ನು ಗುರುತಿಸಿರುವ ಶ್ರೀ ಶ್ರೀ ಭಾರತೀತೀರ್ಥರು ಸ್ವತಃ ಪಾಠ ಮಾಡಲು ನಿರ್ಧರಿಸಿದ್ದರು ಎಂದು ಹೇಳಲಾಗಿದೆ. ಯಾರಿಗೇ ಆಗಲಿ ಶ್ರೀ ಶ್ರೀ ಭಾರತೀತೀರ್ಥ ಶ್ರೀಗಳು ಸ್ವತಃ ಪಾಠ ಮಾಡುವುದು ಅಪರೂಪ.**

**ವೆಂಕಟೇಶ್ವರಪ್ರಸಾದರ ಪ್ರತಿಭಾಶಕ್ತಿ ಶ್ರೀಗಳ ದೃಷ್ಟಿಗೆ ಬಿದ್ದಿರುವುದು ಇದಕ್ಕೆ ಕಾರಣ ಎನ್ನಲಾಗುತ್ತಿದೆ. ಶೃಂಗೇರಿಗೆ ಬಂದ ಆರಂಭದಲ್ಲಿ ನ್ಯಾಯಶಾಸ್ತ್ರ ಅಧ್ಯಯನ ಮಾಡಿರುವ ವೆಂಕಟೇಶ್ವರ ಪ್ರಸಾದರು ಈಗ ಮೀಮಾಂಸೆ, ವೇದಾಂತಶಾಸ್ತ್ರ ಅಧ್ಯಯನದಲ್ಲಿ ತೊಡಗಿದ್ದಾರೆ. ವೈರಾಗ್ಯ ಸ್ವಭಾವದವರಾದ ಅವರು ದೈನಂದಿನ ಲೌಕಿಕ ಚಟುವಟಿಕೆಗಳಲ್ಲಿ ಆಸಕ್ತಿ ತೋರದೆ ಜ್ಞಾನಾರ್ಜನೆಯಲ್ಲಿ ನಿರತರಾಗಿದ್ದಾರೆ.**

---

ಪ್ರಥಮ ಬಹುಮಾನ :
**ರೂ.10,001/-**
ಪ್ರಾಯೋಜಕರು :
ದಿ| ಭುಜಂಗರಾವ್ ಮತ್ತು ಶಾಂತಾದೇವಿ
ಸ್ಮರಣಾರ್ಥ
ಅಲೆವೂರು ಶ್ಯಾಮರಾವ್ ಮತ್ತು
ಶ್ರೀಮತಿ ಸಾವಿತ್ರಿ ಎಸ್.ರಾವ್
ದಂಪತಿಗಳು

## ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿ

### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2015

ತಾ.15-02-2015ನೇ ರವಿವಾರ ಉಡುಪಿಯ ಎಮ್.ಜಿ.ಎಮ್ ಕಾಲೇಜು ಗ್ರೌಂಡ್‌ನಲ್ಲಿ ನಡೆಯಲಿದೆ.
ಆಸಕ್ತ ತಂಡಗಳು 05-02-2015ರೊಳಗೆ ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ಟಿ.ವಿಶ್ವನಾಥ್ ಶ್ಯಾನುಭೋಗ್ (M : 9741785551), ಪ್ರಕಾಶ್ ರಾವ್ ಕೋಲ್ಪೆ (M : 9481267269), ಎಂ. ಸಂತೋಷ್ ರಾವ್ (M : 9900411040) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿ.ಸೂ. : 1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ. 2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ. 3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು. **4) ಅಲೆವೂರು ದಿ| ಭುಜಂಗ ರಾವ್ ಮತ್ತು ದಿ| ಶಾಂತಾದೇವಿ ಸ್ಮರಣಾರ್ಥ ಅವರ ಪುತ್ರ, ಅಲೆವೂರು ಶ್ಯಾಮರಾವ್ ಮತ್ತು ಡಾ| ಬಿ.ಎಚ್.ರಾಘವ ರಾವ್ ಸಹೋದರರು, ಕುಟುಂಬದವರು ನೀಡುವ ನಗದು ಬಹುಮಾನಗಳನ್ನು ವಿಜೇತ ತಂಡಗಳಿಗೆ ವಿತರಿಸಲಾಗುವುದು.**

ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ **ಜ್ಯೂನಿಯರ್ ಕ್ರಿಕೆಟ್ ಪಂದ್ಯಾಟ**ವೂ ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 9-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ.
ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

- ಅಧ್ಯಕ್ಷರು ಮತ್ತು ಸಂಚಾಲಕರು, ಯುವ ವೇದಿಕೆ

---

ತಾ.15-02-2015 ಬೆಳಿಗ್ಗೆ ಗಂಟೆ 9-00ರಿಂದ **ಮಹಿಳೆಯರು ಮತ್ತು ಮಕ್ಕಳಿಗಾಗಿ** ಶ್ರೀಶಾರದಾ ಮಂಟಪದಲ್ಲಿ
**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ.

**ಮಕ್ಕಳ ಮತ್ತು ಮಹಿಳಾ ವಿಭಾಗದ ಸ್ಪರ್ಧೆಗಳ ವಿವರ :** 1) 3 ವರ್ಷದೊಳಗಿನ ಮಕ್ಕಳಿಗೆ-ಕಿತ್ತಳೆ ಸಿಪ್ಪೆ ಸುಲಿಯುವುದು 2) 3-5ವರ್ಷದೊಳಗಿನ ಮಕ್ಕಳಿಗೆ-ಚಾಕಲೇಟ್ ರ್‍ಯಾಪರ್ ಹರಿಯುವುದು, ಗೊಂಬೆ ಪಾಸ್ ಮಾಡುವುದು 3) 1ರಿಂದ 3ನೇ ತರಗತಿಯವರೆಗಿನ ಮಕ್ಕಳಿಗೆ - ಬಾಟಲಿಗೆ ನೀರು ತುಂಬಿಸುವುದು, ಮಣಿ ಹೆಕ್ಕುವುದು. 4) 4ರಿಂದ 6ನೇ ತರಗತಿಯವರೆಗಿನ ಮಕ್ಕಳಿಗೆ-ಮಣಿ ಪೋಣಿಸುವುದು, ಪುಗ್ಗವನ್ನು ಊದಿ ಒಡೆಯುವುದು. 5) 7ರಿಂದ 10ನೇ ತರಗತಿಯವರೆಗಿನ ಮಕ್ಕಳಿಗೆ-ನವಿಲಿಗೆ ಜುಟ್ಟು ಬರೆಯುವುದು, ಸ್ಟ್ರಾದಿಂದ ನೀರು ಎಳೆಯುವುದು 6) ಪಿಯುಸಿಯಿಂದ ಪದವಿ ವರೆಗಿನವರಿಗೆ-ಸ್ಟ್ರಾದಿಂದ ಥರ್ಮೋಕೂಲ್‌ನ ಗೋಲಿ ಹೆಕ್ಕುವುದು. 7) ಮಹಿಳೆಯರಿಗಾಗಿ-ಬಾಂಬಿಂಗ್ ದ ಟೌನ್ 8) 60 ವರ್ಷಕ್ಕೂ ಮೇಲ್ಪಟ್ಟ ಹೆಂಗಸರಿಗೆ-ಬಕೆಟಿಗೆ ಬಾಲ್ ಹಾಕುವುದು 9) ಎಲ್ಲಾ ವಿಭಾಗದವರಿಗೂ ಒಂದು ನಿಮಿಷದ ಆಟಗಳು.

**ಮಹಿಳೆಯರು ಮಕ್ಕಳು ಸಮಯಕ್ಕೆ ಸರಿಯಾಗಿ ಆಗಮಿಸಿ, ಆಸಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.**

- ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಚಿಂತನ

ದೇಶದಾದ್ಯಂತ ಅಪರಾಧಗಳು ಹೆಚ್ಚುತ್ತಿವೆ. ಪೋಲೀಸರು ಈ ಅಪರಾಧಿಗಳ ಬೆನ್ನು ಹತ್ತುತ್ತಾರೆ. ಕೆಲವೊಮ್ಮೆ ಈ ಅಪರಾಧಿಗಳ ವಿಚಾರಣೆ, ಅವರು ಮಾಡಿದ ಕೃತ್ಯಗಳ ಬಗ್ಗೆ ತನಿಖೆ ನಡೆಸಿ ಅಪರಾಧಗಳ ಸತ್ಯತೆ ಅಥವಾ ಸಾಧ್ಯತೆಗಳ ಸಂಶೋಧನೆಗಳನ್ನು ಪ್ರಕಟಿಸುತ್ತಾರೆ. ಇದು ಸಣ್ಣ ಪುಟ್ಟ ಅಪರಾಧಗಳಿಂದ ಪ್ರಾರಂಭಿಸಿ ದೊಡ್ಡ ದೊಡ್ಡ ಕ್ರಿಮಿನಲ್ ಕೇಸಿನವರೆಗೂ ಮುಂದುವರಿಯುತ್ತದೆ. ನಮ್ಮ ದೇಶದಲ್ಲಿ ಭಯೋತ್ಪಾದನೆಯಲ್ಲಿ ತೊಡಗಿಕೊಂಡಿರುವ ಅಪರಾಧಿಗಳ ವಿಚಾರದಲ್ಲಿಯೂ ಇಲ್ಲಿ ಯಾವುದೇ ರಾಜಿಯ ಮಾತೇ ಇಲ್ಲ.


ಈ ಸಂಧರ್ಭದಲ್ಲಿ ಪೋಲೀಸರನ್ನು ಬಾಯಿ ಬಡಿಸಲು ನಮ್ಮ ಮಾಧ್ಯಮ ಪ್ರತಿನಿಧಿಗಳು ಸಿದ್ಧರಾಗಿರುವುದು ಸಹಜ. ಪತ್ರಿಕಾ ಧರ್ಮದಂತೆ ಅವರು ವಿವರ ಕೇಳಿ ಅದಕ್ಕೊಂದಿಷ್ಟು ಮಸಾಲೆ ಸೇರಿಸಿ ಮಾಧ್ಯಮದಲ್ಲಿ ಪ್ರಕಟಿಸುವುದು ಇದ್ದೇ ಇದೆ ತಾನೆ? ಇವೆಲ್ಲ ನಾವು ನೀವು ತಿಳಿದುಕೊಂಡಿರುವ ವಿಚಾರ.

ಆದರೆ ಕೆಲವೊಂದು ಸಂದರ್ಭಗಳಲ್ಲಿ ಪೋಲೀಸರು ಇದ್ದುದನ್ನು ಇದ್ದಂತೆ ಮಾಧ್ಯಮಗಳಿಗೆ ಹೇಳಿ ಅದು ಪ್ರಕಟಗೊಂಡರೆ ಅದರಿಂದ ತೊಂದರೆಯಾಗುವುದೂ ಇದೆ. ಇಂತಹ ಅನೇಕ ಸಂದರ್ಭಗಳನ್ನು ನಾವು ಉದಾಹರಿಸಬಹುದು. ಬೆಂಗಳೂರಿನಲ್ಲಿ ಇತ್ತೀಚೆಗೆ ಯಾವುದೋ ಉಗ್ರಗಾಮಿ ಸಂಘಟನೆಯ ಪರ ಒಬ್ಬಾತ ತನ್ನ ಕಂಪ್ಯೂಟರ್ ಮೂಲಕ ಟ್ವೀಟ್ ಮಾಡುತ್ತಿದ್ದಂತೆ ಸಿಕ್ಕಿಬಿದ್ದದ್ದು, ದೇಶದೆಲ್ಲೆಡೆ ಭಯೋತ್ಪಾದಕರೆನ್ನುವ ವ್ಯಕ್ತಿಗಳು ಸೆರೆಸಿಕ್ಕಿದಾಗ, ಕಳ್ಳಸಾಗಾಣಿಕೆಗಾರರ ದೊಡ್ಡ ಜಾಲವೇ ಇದೆ ಎಂದು ತಿಳಿದಿದ್ದರೂ ಅವರಲ್ಲಿ ಒಬ್ಬನನ್ನು ಹಿಡಿದಾಗ........... ಹೀಗೆ ಹತ್ತು ಹಲವು ಪ್ರಕರಣಗಳನ್ನು ಗುರುತಿಸಿಕೊಳ್ಳಬಹುದು. ಇಲ್ಲಿ ಪೋಲೀಸರು ತಾವು ಮಾಡಿದ ಈ ಕಾರ್ಯವನ್ನು ದೊಡ್ಡ 'ಸಾಧನೆ' ಎಂಬ ವಿಚಾರದಲ್ಲಿ ಮಾಧ್ಯಮಕ್ಕೆ ವಿವರ ಕೊಡುವುದಲ್ಲದೆ, ಆ ಅಪರಾಧಿಗಳ ಜೊತೆ ನಿಂತು ತಮ್ಮ 'ಸಾಧನೆ'ಯನ್ನು ಚಿತ್ರ ಸಹಿತ ಮಾಧ್ಯಮಗಳಲ್ಲಿ ಪ್ರಕಟಿಸುವುದನ್ನೂ ನಾವು ನೋಡುತ್ತೇವೆ.

ಬೇರೆ ಬೇರೆ ಇಲಾಖೆಗಳಲ್ಲಿರುವ ಕೆಲಸಗಾರರು ತಾವು ಮಾಡಿದ ಪ್ರತಿಯೊಂದು ಕೆಲಸವನ್ನು 'ಸಾಧನೆ' ಎಂದು ತಿಳಿದುಕೊಳ್ಳುತ್ತಾರೆಯೇ? ಅವೆಲ್ಲವನ್ನೂ ಪತ್ರಿಕೆಯಲ್ಲಿ ಪ್ರಕಟಿಸುತ್ತಾರೆಯೇ? ಅಪರಾಧಿಗಳನ್ನು ಹಿಡಿಯುವುದು ಪೋಲೀಸರ ಕೆಲಸವಲ್ಲವೇ? ಪ್ರತಿಸಲವೂ ಇದರ ಎಲ್ಲಾ ವಿವರವನ್ನು ಪ್ರಕಟಿಸಬೇಕೇ?

ಎಲ್ಲಕ್ಕಿಂತಲೂ ಮುಖ್ಯವಾಗಿ ಸುರಕ್ಷತೆಯ ದೃಷ್ಟಿಯಿಂದ ಹಾಗೂ ಇಂತಹ ಅಪರಾಧ ಮಾಡಿದವರ ಕಡೆಯವರಿಗೆ ಕೆಲವೊಂದು ಸಂದರ್ಭದಲ್ಲಿ ಪೋಲೀಸರ ಈ 'ಸಾಧನೆ'ಯ ಬಗ್ಗೆ ತಿಳಿಯದಿರುವುದೇ ಒಳ್ಳೆಯದು. ಈ ಎಲ್ಲಾ ವಿಚಾರ ನಮ್ಮ ಪೋಲೀಸು ಇಲಾಖೆಗೆ, ಗುಪ್ತಚರ ಇಲಾಖೆಗೆ ತಿಳಿಯದಿರುವುದೇ?

# ಕನ್ನಡ ಕವಿಕಾವ್ಯ ಪರಿಚಯ-೧೧ : ಷಟ್ಪದಿ ಕವಿ ರಾಘವಾಂಕ-3



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

**ಕವಿ ರಾಘವಾಂಕನ ಮತದ ವಿಚಾರ :**

ಈತನು ಶಿವಭಕ್ತನಾದ ಕವಿ. 'ಮಹಾಲಿಂಗ ಭಕ್ತರ ಭಕ್ತ.' ಈತನು ಬರೆದಿರುವ ಗ್ರಂಥಗಳ ಸ್ವರೂಪ, ವಿಷಯಗಳು, ಶಿವ-ಶೈವ ಪಕ್ಷಪಾತ ಇವುಗಳಿಂದಲೇ ಈತನು ಶಿವಭಕ್ತನಾದ ಕವಿ ಎಂಬುದು ಸಿದ್ಧವಾಗುತ್ತದೆ. ಹರಿಶ್ಚಂದ್ರ ಕಾವ್ಯದ ಆರಂಭದಲ್ಲಿ 'ಗುರುಮೂರ್ತಿ ಪಂಪಾಪತಿ ವಿರೂಪಾಕ್ಷ ನೆಮಗಿಷ್ಟಸಿದ್ಧಿಯಂ ಮಾಳ್ಕೆ ಸಂತೋಷದಿಂದ' ಎಂದು ತನ್ನ ಇಷ್ಟದೈವನಾದ ಪಂಪಾಪತಿ ವಿರೂಪಾಕ್ಷನನ್ನು ಧ್ಯಾನಿಸಿದ್ದಾನೆ. ಹಾಗೆಯೇ ಮುಂದೆ ಕಾವ್ಯ ಭಾಗದಲ್ಲಿ, 'ದೇವಲೋಕದ ದೇವೇಂದ್ರನ ಸಭೆಯಲ್ಲಿ ವಿಶ್ವಾಮಿತ್ರ ಮತ್ತು ವಸಿಷ್ಠರಿಬ್ಬರು ಮುನಿಕುಲದ ನಡುವೆ ಶೋಭಿಸುತ್ತಿದ್ದರು' ಎಂದು ಹೇಳುವ 'ಮಾಲೋಪಮಾಲಂಕಾರದಲ್ಲಿ' ಭೂಮಿಯಲ್ಲಿ ಹರಿಯುತ್ತಿರುವ ನಾನಾ ನದಿಗಳ ನಡುವೆ ಶ್ರೇಷ್ಠವಾದ ಗಂಗಾನದಿ ಮತ್ತು ತನ್ನೂರಿನಲ್ಲಿ (ವಿರೂಪಾಕ್ಷನ ಸನ್ನಿಧಿಯಲ್ಲಿ) ಹರಿಯುತ್ತಿರುವ ತುಂಗಭದ್ರೆ-ಇವುಗಳೆರಡು ಅತಿ ಶ್ರೇಷ್ಠವಾದುವುಗಳೆಂದು ಹೇಳುತ್ತಾನೆ. ಇಲ್ಲಿ ತನ್ನ ಊರು ಮತ್ತು ತುಂಗಭದ್ರಾ ನದಿಗಳನ್ನು ಹೊಗಳಿರುವುದರಿಂದ ಇವನ ಶೈವ ಪ್ರೇಮವು ಹೊಮ್ಮುತ್ತದೆ. ಹರಿಶ್ಚಂದ್ರ ಕಾವ್ಯವನ್ನು ಈತನು ಬರೆದಾಗ ಇವನು ನರಸ್ತುತಿ ಮಾಡಿದನೆಂದು ಇವನ ಸೋದರ ಮಾವನಾದ ಹರಿಹರನು ಇವನ ಕೆನ್ನೆಗೆ ಬಾರಿಸಿ ಐದು ಹಲ್ಲುಗಳನ್ನು ಮುರಿದನೆಂದು, ಸೋಮನಾಥ ಚರಿತೆಯೇ ಮುಂತಾದ ಶೈವಕಾವ್ಯಗಳನ್ನು ಬರೆದು ಆ ಹಲ್ಲುಗಳನ್ನು ರಾಘವಾಂಕನು ಪುನಃ ಪಡೆದನೆಂದೂ ಕಥೆಯಿದೆ. ಆದರೆ ಈ ಕಥೆಯನ್ನು ನಂಬುವುದು ಕಷ್ಟ. ಕಾರಣ, ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರನು ಶಿವನ ಭಕ್ತನೆಂದೇ ವರ್ಣಿತನಾಗಿದ್ದಾನೆ. ಕಥೆಯ ಕೊನೆಯಲ್ಲಿ ಕವಿಯು ಹರಿಶ್ಚಂದ್ರನ ಕೈಯಿಂದ ಚಂದ್ರಮತಿಯ ಕುತ್ತಿಗೆಯನ್ನು ಕಡಿಯಲು ಖಡ್ಗವನ್ನೆತ್ತಿ ಹೊಡೆದಾಗ, ಮೂಡಿದವನೇ 'ಕೆಂಜೆಡೆಯ, ಶಶಿಕಳೆಯ, ಸುರನದಿಯ, ಬಿಸುಗಣ್ಣ, ಫಣಿಕುಂಡಲದ, ಪಂಚಮುಖದ, ಎಡದ ಗಿರಿಜೆಯ, ತಳಿತ ದಶಭುಜದ, ಪುಲಿದೊಗಲಿನುಡುಗೆಯ, ಮಹಾವಿಷ್ಣುನಯನವೇರಿಸಿದ ಮೆಲ್ಲಡಿಯ, ಕಾಶೀರಮಣ ವಿಶ್ವನಾಥನು' ಎಂದಿದ್ದಾನೆ. ಇದರಿಂದಾಗಿ ಇತನು ಶಿವಭಕ್ತನೆಂಬುದು ನಿರ್ವಿವಾದ. ಶೈವ ಕವಿಗಳಿಗೆ ಶಿವನ ಚರಿತೆ ಎಷ್ಟು ಪೂಜ್ಯವೋ ಶಿವಶರಣರ ಚರಿತೆಯೂ ಅಷ್ಟೇ ಪೂಜ್ಯವಾದದ್ದು. ಅಲ್ಲದೆ ಕವಿ ರಾಘವಾಂಕನ ಅಭಿಮತದಂತೆ ಹರಿಶ್ಚಂದ್ರ ಕಾವ್ಯಕ್ಕೆ 'ಒಡೆಯನಮಳ ಪಂಪಾವಿರೂಪಾಕ್ಷನಲ್ಲದೆ ಹರಿಶ್ಚಂದ್ರನಲ್ಲಿ 'ರಾಘವಾಂಕನು ಶರಣರ ಚಾರಿತ್ರ ಪಂಚಕಾವ್ಯವಂ ಪೇಳಿದನು ಎಂದು ಪ್ರವಾದವಿದೆ. ಈ 'ಪಂಚ ಚಾರಿತ್ರ'ಗಳಲ್ಲಿ ಹರಿಶ್ಚಂದ್ರ ಕಾವ್ಯವೂ ಒಂದಾಗಿರಬಹುದು. ಏಕೆಂದರೆ ಕೆಲವು ಕಡೆ ಇದಕ್ಕೆ ಹರಿಶ್ಚಂದ್ರ ಚರಿತೆ ಎಂಬ ಹೆಸರೂ ಕಂಡು ಬರುತ್ತದೆ. ಕವಿಯೂ "ಕೃತಿಗೆ ನಾಮಂ ಹರಿಶ್ಚಂದ್ರ ಚಾರಿತ್ರ" ಎಂದು ಹೇಳಿದ್ದಾನೆ.

ಸಾಮಾನ್ಯವಾಗಿ ವೀರಶೈವ ಕವಿಗಳು ತಮ್ಮ ಗ್ರಂಥಾದಿಯಲ್ಲಿ ಬಸವ, ಚನ್ನಬಸವಾದಿಗಳನ್ನು ಸ್ತುತಿಸುವುದುಂಟು. ಹರಿಹರನಾಗಲಿ, ರಾಘವಾಂಕನಾಗಲಿ ಇವರನ್ನು ಸ್ತುತಿಸಿಲ್ಲ. ಇದಕ್ಕೆ ಕಾರಣವೇನೆಂದು ನಿರ್ಧಾರವಾಗಿ ಏನೂ ಹೇಳಲಾಗುವುದಿಲ್ಲ. ಹರಿಹರಾದಿಗಳು ಬಸವ-ಚನ್ನಬಸವರಿಗಿಂತ ಹಿಂದೆ ಇದ್ದರೂ ಇದ್ದಿರಬಹುದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ಇವರೆಲ್ಲರೂ ಒಂದು ವೇಳೆ ಸ್ವಲ್ಪ ಹೆಚ್ಚು ಕಡಿಮೆ ಸಮಕಾಲಿಕರೆಂದಾದರೂ ಹೇಳಬಹುದಲ್ಲದೆ ಹರಿಹರಾದಿಗಳು ಮುಂಚೆ ಇದ್ದರು ಎಂದು ಹೇಳುವುದು ಕಷ್ಟ. ಹರಿಹರ-ರಾಘವಾಂಕರು ವೀರಶೈವವರೇ ಆದರೂ ಬಸವೇಶ್ವರನ ಮತಾನುಯಾಯಿಗಳಲ್ಲದಿರಬಹುದೆಂಬುದು ಮತ್ತೆ ಕೆಲವರ ಮತ. ಆದರೆ ಹರಿಹರನು 'ಶರಣರ ರಗಳೆ'ಗಳನ್ನು ಬರೆದಿರುವ ಸಾಲಿನಲ್ಲಿ 'ಬಸವರಾಜ ದೇವರ ರಗಳೆ' ಎಂಬುದನ್ನೂ ಬರೆದಿರುವುದರಿಂದ ಹರಿಹರನು ಬಸವಣ್ಣನವರ ನಂತರ ಜೀವಿಸಿದ್ದವನೆಂಬುದು ಸಂಪೂರ್ಣ ಸಿದ್ಧವಾಗುತ್ತದೆ. ಇದರಿಂದ ಹರಿಹರ-ರಾಘವಾಂಕರಿಗೆ ಬಸವೇಶ್ವರನಲ್ಲಿ ಪೂಜ್ಯ ಭಾವವಿತ್ತೆಂದು ಹೇಳಬಹುದು ಹರಿಹರ-ರಾಘವಾಂಕರು ಹಿಂದಿನಿಂದ ಬಂದ ಜಾತಿ ಮತ ಕುಲಾಚಾರಗಳಿಗೆ ಮರ್ಯಾದೆಯನ್ನು ಕೊಟ್ಟು, ಶೈವಾಗಮಾನುಸಾರವಾಗಿ ಕರ್ಮಾಚರಣೆ ಮಾಡಿಕೊಂಡು ಬರುತ್ತಿದ್ದ ಶೈವರೆಂದೂ, ಬಸವ, ಸಿದ್ಧರಾಮ, ಅಲ್ಲಮಾದಿಗಳು ಕರ್ಮ, ಜಾತಿ, ಮತಾಗಮಗಳ ಬಂಧನವನ್ನು ನೀಗಿಕೊಂಡು ಶಿವಾನುಭವ ಸತ್ವಶುದ್ಧಿಗಳಿಗೆ ಪ್ರಾಶಸ್ತ್ಯ ಕೊಡುತ್ತಿದ್ದ ಸಿದ್ಧಪುರುಷರೆಂದೂ ಅವರ ಗ್ರಂಥಗಳಿಂದ ಊಹಿಸಬಹುದಾಗಿದೆ.

(ಮುಂದುವರಿಯುವುದು)

# ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ, ಮುಂಬಯಿಯ ಅಮೃತ ಮಹೋತ್ಸವಾಚರಣೆ



ಕಳೆದ ನವಂಬರ್ 15 ಮತ್ತು 16 ರಂದು ಸುಬ್ರಹ್ಮಣ್ಯ ಸೇವಾ ಸಂಘ ಮುಂಬಯಿ, ತನ್ನ ಅಮೃತ ಮಹೋತ್ಸವವನ್ನು ಬಹು ಸಂಭ್ರಮದಿಂದ ಆಚರಿಸಿತು. ಮೊದಲ ದಿನದ ಕಾರ್ಯಕ್ರಮ ಕರ್ನಾಟಕ ಸಂಘದ ಸರ್ ವಿಶ್ವೇಶ್ವರಯ್ಯ ಸ್ಮಾರಕ ಸಭಾಗೃಹದಲ್ಲಿ ನಡೆಯಿತು.

ಮೊದಲ ದಿನ ಸಂಜೆ ಕುಮಾರಿ ನವ್ಯಾ ರಾವ್ ಅವರಿಂದ ಪ್ರಾರ್ಥನೆಯ ನಂತರ, 3ರಿಂದ 4.30ರವರೆಗೆ ದಿವ್ಯಶ್ರೀ ಶ್ಯಾನುಭೋಗ್, ಪ್ರಿಯಾಂಜಲಿ ರಾವ್, ರಕ್ಷಾ ಮಧುಸೂದನ್ ರಾವ್ ಮತ್ತು ಶ್ರೀಮತಿ ಮನಾಲಿರಾವ್ ಅವರಿಂದ ಶಾಸ್ತ್ರೀಯ ನೃತ್ಯ ಪ್ರದರ್ಶನ ಗೊಂಡವು. ವಿರಾಮದ ನಂತರ ಶ್ರೀ ಪವನ್ ಮಧುಸೂದನ್ ಅವರಿಂದ ಗಣಪತಿ ಸ್ತುತಿಯೊಂದಿಗೆ ಸಭಾ ಕಾರ್ಯಕ್ರಮ ಆರಂಭವಾಯಿತು. ವೇದಿಕೆಯಲ್ಲಿ ಮುಖ್ಯ ಅತಿಥಿಯಾದ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಎಚ್. ಸುರೇಶ್, ಸುಬ್ರಹ್ಮಣ್ಯ ಸೇವಾ ಸಂಘದ ಅಧ್ಯಕ್ಷ ಶ್ರೀ ಎ. ಎಸ್ ರಾವ್, ಕಾರ್ಯದರ್ಶಿ ಸುಭಾಶ್ಚಂದ್ರ ರಾವ್, ಅಮೃತ ಮಹೋತ್ಸವ ಸಮಿತಿಯ ಅಧ್ಯಕ್ಷ ಶ್ರೀ ಕೆ. ಸುಬ್ಬಣ್ಣ ರಾವ್, ಕಾರ್ಯದರ್ಶಿ ಶ್ರೀ ಸದಾಶಿವ ರಾವ್ ಮತ್ತು ವಿವಿಧ ಸನ್ಮಾನಿತ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ಆ ದಿನ ಮುಂಬಯಿಯಲ್ಲಿ ಈಗಾಗಲೇ ಅಮೃತ ಮಹೋತ್ಸವವನ್ನು ಆಚರಿಸಿರುವ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಹದಿನಾಲ್ಕು ಸಂಘ ಸಂಸ್ಥೆಗಳನ್ನು ಸನ್ಮಾನಿಸುವ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.


ಪ್ರಾಸ್ತಾವಿಕ ಭಾಷಣವನ್ನು ಮಾಡಿದ ಸಂಘದ ಅಧ್ಯಕ್ಷ ಶ್ರೀ ಎ.ಎಸ್ ರಾವ್ ಅವರು, ಮುಖ್ಯ ಅತಿಥಿಯನ್ನು, ಸನ್ಮಾನಗೊಳ್ಳಲಿರುವ ಸಂಘ ಸಂಸ್ಥೆಗಳ ಪದಾಧಿಕಾರಿಗಳನ್ನು ಹಾಗೂ ನೆರೆದ ಗಣ್ಯರನ್ನು ಸ್ವಾಗತಿಸಿದರು.

ಅಮೃತ ಮಹೋತ್ಸವದ ಕಾರ್ಯಾಧ್ಯಕ್ಷ ಶ್ರೀ ಕೆ.ಸುಬ್ಬಣ್ಣ ರಾವ್ ಅವರು ಸಂಘವು ಮಾಡುತ್ತಿರುವ ಸಮಾಜ ಮುಖೀ ಚಟುವಟಿಕೆಗಳ ಕಿರು ಪರಿಚಯವನ್ನು ನೀಡಿದರು ಹಾಗೂ ಸಂಘವು ಇದುವರೆಗೆ ನಡೆದು ಬಂದ ದಾರಿಯನ್ನು ವಿವರಿಸಿದರು. ನಂತರ ನಡೆದ ಸನ್ಮಾನ ಸಮಾರಂಭದಲ್ಲಿ ವೇದಿಕೆಯಲ್ಲಿದ್ದ, ಶ್ರೀ ಮದ್ಭಾರತ ಮಂಡಳಿ, ಮೊಗವೀರ ವ್ಯವಸ್ಥಾಪಕ ಮಂಡಳಿ, ವಿದ್ಯಾದಾಯಿನಿ ಸಭಾ, ಬಿ.ಎಸ್.ಕೆ.ಬಿ. ಅಸೋಸಿಯೇಷನ್, ಮೈಸೂರು ಅಸೋಸಿಯೇಷನ್, ದೇವಾಡಿಗ ಸಂಘ, ಬಂಟರ ಸಂಘ, ಕುಲಾಲ ಸಂಘ, ಬಿಲ್ಲವರ ಅಸೋಸಿಯೇಷನ್, ಕರ್ನಾಟಕ ಸಂಘ, ಮುಂಬಯಿ ಕನ್ನಡ ಸಂಘ, ಪದ್ಮಶಾಲೀ ಕನ್ನಡ ಸಂಘ, ಸತ್ಯಧ್ಯಾನ ವಿದ್ಯಾ ಪೀಠ, ರಾಷ್ಟ್ರೀಯ ಕನ್ನಡ ಶಿಕ್ಷಣ ಸಂಸ್ಥೆ ಇವುಗಳ ಪ್ರತಿನಿಧಿಗಳನ್ನು ಸನ್ಮಾನ ಪತ್ರ, ಸ್ಮರಣಿಕೆ, ಶಾಲುಗಳೊಂದಿಗೆ ಸನ್ಮಾನಿಸಲಾಯಿತು. ಶ್ರೀಮತಿಯರಾದ ಪ್ರೇಮಾ ರಾವ್, ಅನುರಾಧಾ ರಾವ್, ಅಂಜನಾ ರಾವ್

(4ನೇ ಪುಟಕ್ಕೆ...)

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಳಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ

## ಚಿತ್ರಕಲೆಯಲ್ಲಿ ಪ್ರಥಮ ಸ್ಥಾನ : ವಿನ್ಯಾಸ್ ರಾವ್



ಉಡುಪಿಯ ಮಲ್ಪೆಯಲ್ಲಿ ದಿನಾಂಕ 25-12-2014ರಂದು ಭಾರತೀಯ ಜನತಾ ಪಾರ್ಟಿಯ ವತಿಯಿಂದ ಶ್ರೀ ವಾಜಪೇಯಿ ಜನ್ಮ ದಿನಾಚರಣೆ ಪ್ರಯುಕ್ತ ನಡೆದ ಉಡುಪಿ ಜಿಲ್ಲಾ ಮಟ್ಟದ ಸಾಂಸ್ಕೃತಿಕ-ಕ್ರೀಡಾ ಕಲರವ 'ಯುವ ಸಂಗಮ'ದಲ್ಲಿ ಶ್ರೀ ವಾಜಪೇಯಿಯವರ ಭಾವಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ ಉಡುಪಿ ಪೂರ್ಣಪ್ರಜ್ಞಾ ಕಾಲೇಜಿನ ಪ್ರಥಮ ಪಿ ಯು ಸಿ ವಿದ್ಯಾರ್ಥಿ ವಿನ್ಯಾಸ್ ರಾವ್ ಪ್ರಥಮ ಬಹುಮಾನ ವಿಜೇತರಾಗಿದ್ದಾರೆ. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ಬಹುಮಾನ ವಿತರಿಸಿದರು.

ಉಡುಪಿಯ ರಾಧಾ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತವ್ಯದಲ್ಲಿರುವ ಶ್ರೀ ಬಾಲಚಂದ್ರ ರಾವ್ ಎಲ್ಲೂರು ಹಾಗೂ ಶ್ರೀಮತಿ ಶಾಂತಿ ದಂಪತಿಗಳ ಪುತ್ರರಾಗಿರುವ ವಿನ್ಯಾಸ್ ರಾವ್ ಕಳೆದ ಎಪ್ರಿಲ್ ತಿಂಗಳಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿಯೂ 92% ಅಂಕಗಳೊಂದಿಗೆ ತೇರ್ಗಡೆಯಾಗಿದ್ದುದನ್ನು ಶ್ರೀ ಶಾರದಾ ಪತ್ರಿಕೆಯಲ್ಲಿ ವರದಿ ಮಾಡಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಶ್ರೀ ವಿನ್ಯಾಸ್ ರಾವ್‌ನ ಸಾಧನೆಗೆ ಶ್ರೀ ಶಾರದಾ ಮತ್ತೊಮ್ಮೆ ಅಭಿನಂದನೆಗಳು.

## ಉನ್ನತಾಂಕ ಉತ್ತೀರ್ಣ : ಚಿ। ಸಾಗರ್.ಪಿ.




ಸುಳ್ಯ ತಾಲೂಕು ಪೆರುವಾಜೆ ಶ್ರೀಮತಿ ಸುನೀತಾ ಮತ್ತು ಡಾ।ಪಿ.ಮನೋಹರ್ ಇವರ ಪುತ್ರ ಚಿ। ಸಾಗರ್.ಪಿ. ಇವನು ಸಂಗೀತ ಸೀನಿಯರ್ ಪರೀಕ್ಷೆಯಲ್ಲಿ ಶೇಕಡಾ ೮೮ ಅಂಕಗಳನ್ನು ಗಳಿಸಿ ಉತ್ಕೃಷ್ಟ ಶ್ರೇಣಿಯಲ್ಲಿ ಉತ್ತೀರ್ಣನಾಗಿರುತ್ತಾನೆ. ಬೆಳ್ಳಾರೆಯ ಜ್ಞಾನಗಂಗಾ ಪಬ್ಲಿಕ್ ಸ್ಕೂಲ್‌ನ 10ನೇ ತರಗತಿಯ ವಿದ್ಯಾರ್ಥಿಯಾಗಿರುವ ಸಾಗರ್, ವಿದುಷಿ ಶಂಕರೀಮೂರ್ತಿ ಬಾಳಿಲ ಇವರಿಂದ ಸಂಗೀತ ಅಭ್ಯಾಸ ಮಾಡುತ್ತಿದ್ದಾನೆ. ಇವನು ಪ್ರಸಿದ್ಧ ಹರಿದಾಸರೂ, ಪ್ರಸ್ತುತ ಉಡುಪಿಯ ಎಸ್.ಎಮ್.ಎಸ್.ಪಿ ಸಂಸ್ಕೃತ ಕಾಲೇಜಿನಲ್ಲಿ ಗೌರವ ಉಪನ್ಯಾಸಕರೂ ಆಗಿರುವ ಶ್ರೀ ಮ.ನಾ. ಹೆಬ್ಬಾರ್‌ರವರ ಮೊಮ್ಮಗನಾಗಿರುವನು. ಈತನಿಗೆ ಶ್ರೀಶಾರದಾ ಅಭಿನಂದನೆಗಳು

## ಜ್ಞಾನಮಂದಿರದಲ್ಲಿ ಪುಸ್ತಕ ಬಿಡುಗಡೆ



ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್(ರಿ.) ಪ್ರಕಾಶನದಲ್ಲಿ ಟ್ರಸ್ಟ್‌ನ ಟ್ರಸ್ಟಿಗಳಾದ ವೈ.ಶಾಂತಿನಾಥರಾವ್ ಅವರು ಬರೆದ ಎರಡನೇ ಕೃತಿಯಾದ **ಬ್ರಹ್ಮಾತ್ಮೈಕತ್ವಜ್ಞಾನಾನುಭವ**ವೆಂಬ ಪುಸ್ತಕವನ್ನು ಉಡುಪಿಯ ಜ್ಞಾನಮಂದಿರದಲ್ಲಿ ದಿನಾಂಕ 26-12-2014ರಂದು ಟ್ರಸ್ಟಿಗಳಾದ ವೈ. ಭುವನೇಂದ್ರ ರಾವ್ ಅವರ ಅಧ್ಯಕ್ಷತೆಯಲ್ಲಿ ನಿವೃತ್ತ ಬ್ಯಾಂಕ್ ಉದ್ಯೋಗಿ ಶ್ರೀ ಎಮ್.ಕೃಷ್ಣಮೂರ್ತಿ ರಾವ್ ಅವರು ಬಿಡುಗಡೆಗೊಳಿಸಿದರು. ಪುಸ್ತಕದ ಲೇಖಕರಾದ ವೈ.ಶಾಂತಿನಾಥ ರಾವ್ ಪ್ರಾಸ್ತಾವಿಕ ಮಾತನಾಡಿದರು. ಟ್ರಸ್ಟ್‌ನ ಸಂಚಾಲಕರಾದ ಡಾ। ವೈ.ಎಸ್.ರಾವ್ ಕಾರ್ಯಕ್ರಮವನ್ನು ನಿರೂಪಿಸಿ ಧನ್ಯವಾದವನ್ನಿತ್ತರು. ಉಪನಿಷತ್‌ನಲ್ಲಿ ವಿವರಿಸಲಾದ ಬ್ರಹ್ಮ ಹಾಗೂ ಆತ್ಮ ಒಂದೇ ಎಂಬ ವಿಚಾರವನ್ನು ಶ್ರೀಶಂಕರ ಭಗವತ್ಪಾದರ ಭಾಷ್ಯಗಳನ್ನು ಆಧರಿಸಿ ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಆಧ್ಯಾತ್ಮಿಕವಾಗಿ ಸಾಧನೆ ಮಾಡುವವರಿಗೆ ಉಪಯುಕ್ತವಾದ ಈ ಪುಸ್ತಕದ ಗೌರವ ಪ್ರತಿಯನ್ನು ಆಸಕ್ತರು ವೈ. ಶಾಂತಿನಾಥರಾವ್ ಕುತ್ಪಾಡಿ (9880170980) ಹಾಗೂ ಡಾ। ವೈ.ಎಸ್.ರಾವ್ (9845136322) ಇವರಲ್ಲಿ ವಿಚಾರಿಸಿ ಪಡೆದುಕೊಳ್ಳಬಹುದೆಂದು ವಿನಂತಿಸಿಕೊಳ್ಳಲಾಗಿದೆ.

## ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ ಪುತ್ತೂರು



ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಪೂರ್ಣ ಅನುಗ್ರಹದಿಂದ ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ನೂತನ ಶಿಲಾಮಯಾ ಗರ್ಭಗುಡಿಯ ಕೆಲಸವೂ ಪೂರ್ಣಗೊಂಡಿದ್ದು, ಇನ್ನು ಸುತ್ತು ಪೌಳಿ, ಗೋಪುರ ನಿರ್ಮಾಣದ ಕೆಲಸವು ಭರದಿಂದ ನಡೆಯುತ್ತಿದೆ. ಈ ಕಾರ್ಯ ಪೂರ್ಣವಾಗಬೇಕಾದರೆ ಅಂದಾಜು ರೂ.50 ಲಕ್ಷ ಬೇಕಾಗಿದೆ. ಸಮಾಜ ಬಾಂಧವರು ಶ್ರೀ ದೇವಿಯ ಪುಣ್ಯ ಕೆಲಸಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ದೇಣಿಗೆಯನ್ನು ನೀಡಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ದೇವಳದ ಆಡಳಿತ ಮಂಡಳಿಯು ವಿನಂತಿಸುತ್ತದೆ.

### ಕರ್ನಾಟಕ ಗಮಕ ಕಲಾ ಪರಿಷತ್ತಿನ ಉಡುಪಿ ಜಿಲ್ಲಾ ಪ್ರತಿನಿಧಿಯಾಗಿ

## ಶ್ರೀ ಸತೀಶ್ ಕುಮಾರ್ ಕೆಮ್ಮಣ್ಣು, ನಿಟ್ಟೆ



ಬೆಂಗಳೂರು: ದಶಂಬರ್ 14ರಂದು ನಡೆದ ಅಖಿಲ ಕರ್ನಾಟಕ ಗಮಕ ಕಲಾ ಪರಿಷತ್ತಿನ 32ನೆಯ ಮಹಾ ಸಭೆಯು ಶ್ರೀ ಸತೀಶ್ ಕುಮಾರ್ ಕೆಮ್ಮಣ್ಣು, ನಿಟ್ಟೆ ಅವರನ್ನು ಉಡುಪಿ ಜಿಲ್ಲಾ ಪ್ರತಿನಿಧಿಯಾಗಿ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಿದೆ ಎಂದು ತನ್ನ ಅಧಿಕೃತ ಪ್ರಕಟನೆಯಲ್ಲಿ ತಿಳಿಸಿದೆ.

ಶ್ರೀ ಸತೀಶ್ ಕುಮಾರ್ ಕೆಮ್ಮಣ್ಣು, ನಿಟ್ಟೆ ಅವರು ಕಾರ್ಕಳ ಬೋಳ ಪಿಲಿಯೂರು ಶ್ರೀ ರಾಮಕೃಷ್ಣ ಅನುದಾನಿತ ಹಿ.ಪ್ರಾ. ಶಾಲೆಯಲ್ಲಿ ಅಧ್ಯಾಪಕರಾಗಿ, ಮುಖ್ಯೋಪಾಧ್ಯಾಯರಾಗಿ 38 ವರುಷ ದುಡಿದು ನಿವೃತ್ತರಾಗಿದ್ದಾರೆ. ಈ ಪರಿಸರದಲ್ಲಿ ಸಾಹಿತ್ಯ ಸಂಸ್ಕೃತಿ, ಸಂವರ್ಧನ ಚಟುವಟಿಕೆಗಳಲ್ಲಿ ಸದಾ ತೊಡಗಿಸಿಕೊಂಡಿರುವ ಅವರು ಕಾಂತಾವರ ಕನ್ನಡ ಸಂಘದಲ್ಲಿಯೂ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಿದೆ. ಅಂತಾರಾಷ್ಟ್ರೀಯ ಸಂಸ್ಥೆಯಾದ ಬೆಳ್ಮಣ್ ಜೆ.ಸಿ, ನಿಟ್ಟೆ ರೋಟರಿ ಸಂಸ್ಥೆ ಮತ್ತು ಮಿತ್ರ ವೃಂದ(ರಿ.) ಬರಬೈಲು ಬೋಳ ಇದರಲ್ಲಿ ಗೌರವ ಅಧ್ಯಕ್ಷರಾಗಿ, ಮುಖ್ಯ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿರುವ ಅವರು ಗಮಕ ಕಲೆಯಲ್ಲಿ ವಿಶೇಷ ಪರಿಶ್ರಮವನ್ನು ಮಾಡಿದ್ದಾರೆ. ಸ್ಥಾನಿಕ ಸಮಾಜದಲ್ಲಿಯೂ ವಿವಿಧ ಸಂಘಟನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಯುತರು ಜಿಲ್ಲೆಯಾದ್ಯಂತ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಈ ಎಲ್ಲಾ ಹಿನ್ನಲೆಯಲ್ಲಿ ಕರ್ನಾಟಕ ಗಮಕ ಕಲಾ ಪರಿಷತ್ತು ಶ್ರೀಯುತರನ್ನು ಮೂರು ವರುಷದ ಅವಧಿಗೆ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಮತ್ತು ಜಿಲ್ಲಾ ಪ್ರತಿನಿಧಿಯಾಗಿಯೂ ನೇಮಿಸಿದೆ.

ಗಮಕ ಕಲೆಯಲ್ಲಿ ಆಸಕ್ತಿ ಇರುವವರು ಮತ್ತು ಸಾಹಿತ್ಯ ಸಂಸ್ಕೃತಿ, ಸಂವರ್ಧನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವವರು ಗಮಕ ಕಲಾ ಪರಿಷತ್ತಿನ ಚಟುವಟಿಕೆಗಳನ್ನು ಉಡುಪಿ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರೋತ್ಸಾಹಿಸಬೇಕು ಮತ್ತು ಪರಿಷತ್ತಿನಿಂದ ಈ ಸಂಬಂಧದ ನೆರವು ಬಯಸುವುದಾದರೆ ತಮ್ಮನ್ನು ಸಂಪರ್ಕಿಸಬಹುದು ಎಂದು ಶ್ರೀಯುತರು ಸಾರ್ವಜನಿಕರನ್ನು ವಿನಂತಿಸಿಕೊಂಡಿದ್ದಾರೆ. ನಮ್ಮ ಸಮಾಜದ ಹೆಮ್ಮೆಯ ಶ್ರೀ ಸತೀಶ್ ಕುಮಾರ್ ಕೆಮ್ಮಣ್ಣು, ಇವರ ಸಾಧನೆಗಾಗಿ ಶ್ರೀ ಶಾರದಾ ಅಭಿನಂದನೆಗಳು.

## ಶಾರದಾ ಮಂಟಪದಲ್ಲಿ ಸೇವೆ ಆಟ




ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ಉಡುಪಿಯ ಶ್ರೀ ವೈ.ಮೋಹನ್ ರಾವ್ ಮತ್ತು ಮನೆಯವರಿಂದ ಕಟೀಲು ಶ್ರೀ ದುರ್ಗಾಪರಮೇಶ್ವರೀ ದಶಾವತಾರ ಯಕ್ಷಗಾನ ಮೇಳದವರಿಂದ ದಿನಾಂಕ 20-11-2014ರಂದು "ಶ್ರೀ ದೇವಿ ಮಹಾತ್ಮೆ" ಪ್ರಸಂಗದ ಯಕ್ಷಗಾನ ಬಯಲಾಟ ಸೇವೆಯು ನೆರವೇರಿತು.

ಮೇಳದ ದೇವರಾದ ಶ್ರೀದೇವಿಗೆ ಶಾರದಾ ಮಂಟಪದ ವೇದಿಕೆಯಲ್ಲಿ ಮುಸ್ಸಂಜೆಯ ಸಮಯದಲ್ಲಿ ಭವ್ಯ ಅಲಂಕಾರದೊಂದಿಗೆ ಅಷ್ಟೋತ್ತರ ಸಹಿತ ಶೋಡಷ ಪೂಜೆಯು ನಡೆದು ಪಾಲ್ಗೊಂಡ ಪರಿಸರದ ಭಕ್ತರಿಗೆ ಹಾಗೂ ಬಂಧುಗಳಿಗೆ ಪ್ರಸಾದವನ್ನು ವಿತರಿಸಲಾಯಿತು. ಚೌಕಿಪೂಜೆಯ ನಂತರ ನಡೆದ ಬಯಲಾಟವು ಶ್ರೀಶಾರದಾ ಮಂಟಪದ ಹೊರ ಪ್ರಾಂಗಣದಲ್ಲಿ ಹಾಕಿದ ಭವ್ಯ ರಂಗಸ್ಥಳದಲ್ಲಿ ಪ್ರದರ್ಶಿಸಲ್ಪಟ್ಟು, ಕಂಡ ಕಲಾಭಿಮಾನಿಗಳೂ, ಬಂಧು ಬಾಂಧವರು ನೋಡಿ ಕೃತಾರ್ಥರಾದರು.

## ಕಡಬ ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನ

ಕಡಬ ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ 28ನೇ ಪ್ರತಿಷ್ಠಾ ವಾರ್ಷಿಕೋತ್ಸವವು ಬ್ರಹ್ಮಶ್ರೀ ವಾಗೀಶ ತಂತ್ರಿಗಳ ನೇತೃತ್ವದಲ್ಲಿ ದಿನಾಂಕ 26-01-2015 ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. 25ರಂದು ವಿವಿಧ ಮನೋರಂಜನಾ ಕಾರ್ಯಕ್ರಮಗಳು ಹಾಗೂ ಕೊಲ್ಲಂಗಾನ ಮೇಳದವರಿಂದ ಯಕ್ಷಗಾನ ಬಯಲಾಟವೂ ಜರಗಲಿರುವುದು.ಭಕ್ತಬಾಂಧವರು ಈ ದೇವತಾ ಕಾರ್ಯಗಳಲ್ಲಿ ಸಹಭಾಗಿಗಳಾಗಿ ಶ್ರೀ ದೇವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕೆಂದು ಆಡಳಿತ ಮಂಡಳಿಯು ವಿನಂತಿಸಿಕೊಂಡಿದೆ.

# ಮರೆಯಲಾಗದ ಮಹನೀಯ ನೀಲಾವರ ಲಕ್ಷ್ಮೀನಾರಾಯಣಯ್ಯ



ಸಹೃದಯ ಸಾಧಕ ಗುರುಭಾಗವತ ನೀಲಾವರ ಲಕ್ಷ್ಮೀನಾರಾಯಣಯ್ಯ ಅಲ್ಪಕಾಲದ ಅಸ್ವಾಸ್ಥ್ಯದ ಬಳಿಕ ತಾ.27-12-2014 ರಂದು ಹೇರಂಜೆಯ ತಮ್ಮ ಸ್ವಗೃಹದಲ್ಲಿ ನಿಧನರಾದರು. 90ರ ಹರೆಯದ ಲಕ್ಷ್ಮೀನಾರಾಯಣಯ್ಯರವರು ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಬಂಧುಗಳು ಹಾಗೂ ದೊಡ್ಡ ಅಭಿಮಾನಿ ವರ್ಗವನ್ನು ಅಗಲಿದ್ದಾರೆ.

ನೀಲಾವರ ಸೋಮೇಶ್ವಯ್ಯ ಮತ್ತು ಮಹಾಲಕ್ಷ್ಮೀ ಅಮ್ಮನವರ ಸುಪುತ್ರರಾದ ಇವರ ಜನನ 1925 ರಲ್ಲಿ. ಎಸ್.ಎಸ್.ಎಲ್.ಸಿ ಆದಮೇಲೆ ಮಂಗಳೂರು ಟ್ರೈನಿಂಗ್ ಕಾಲೇಜಿನಲ್ಲಿ 1943ರಿಂದ 45ರವರೆಗೆ ಶಿಕ್ಷಕ ತರಬೇತಿ ಪಡೆದ ಇವರು 1945ರಿಂದ 1981ರ ತನಕ ನೀಲಾವರ ಶ್ರೀ ಮಹಿಷಮರ್ದಿನಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 36 ವರ್ಷಗಳ ಕಾಲ ಆದರ್ಶ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ನೀಲಾವರದ ಹಿರಿಯ ಸಂಗೀತ ವಿದ್ವಾಂಸರಾದ ಶ್ರೀನಿವಾಸ ಕಲ್ಕೂರರಿಂದ 5 ವರ್ಷಗಳ ಕಾಲ ಕರ್ನಾಟಕ ಸಂಗೀತವನ್ನು ಅಭ್ಯಾಸ ಮಾಡಿ, ತಾನು ಪಡೆದುದನ್ನು ನಾಡಿಗೆ ನೀಡಬೇಕೆಂಬ ಮಹದಾಶೆಯಿಂದ ಇಳಿವಯಸ್ಸಿನಲ್ಲಿಯೂ ಆರ್ಥಿಕ ಆಕಾಂಕ್ಷೆ ಇಲ್ಲದೇ ಉತ್ಸಾಹದಿಂದ ಈ ಸೇವೆ ಮಾಡಿದ್ದರು.

ಶ್ರೀಯುತರ ಇನ್ನೊಂದು ಕ್ಷೇತ್ರ ಯಕ್ಷಗಾನ. ಇವರ ಅಣ್ಣ ಹೆಸರಾಂತ ಭಾಗವತ ದಿ. ನೀಲಾವರ ರಾಮಕೃಷ್ಣಯ್ಯ. ಅಣ್ಣ ಗುರು ನೀಲಾವರ ರಾಮಕೃಷ್ಣಯ್ಯನವರ ಗಾನ ಪರಂಪರೆಯನ್ನು ಮುಂದುವರಿಸಿ, ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಮೇಲೆ 1983ರಿಂದ ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಭಾಗವತಿಕೆಯ ಶಿಕ್ಷಕರಾಗಿದ್ದರು. 1991ರಿಂದ 2005ರವರೆಗೆ ಯಕ್ಷಗಾನ ಕೇಂದ್ರದ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು.

ಲಕ್ಷ್ಮೀನಾರಾಯಣಯ್ಯನವರು ಗಮಕ ಕಲೆಯಲ್ಲಿ ನಿಪುಣರು. ಶಿಕ್ಷಕ-ವಿದ್ಯಾರ್ಥಿಗಳಿಗೆ ಮತ್ತು ಉಡುಪಿಯ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳಿಗೆ 2000ದಿಂದ 2005ನೇಯ ಇಸವಿಯ ಅವಧಿಯಲ್ಲಿ ಗಮಕ ತರಬೇತಿ ನೀಡಿದ್ದಾರೆ. ಧರ್ಮಸ್ಥಳ, ಅಂಬಲ್ಪಾಡಿ, ಉಡುಪಿ ಶ್ರೀಕೃಷ್ಣ ಮಠ ಮುಂತಾದ ಕಡೆ ಸರಣಿ ಕಾವ್ಯ ವಾಚನ-ಪ್ರವಚನ ಕಾರ್ಯಕ್ರಮಗಳಲ್ಲಿ ಕಾವ್ಯ ಗಾಯನವನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ.

ಹಾರ್ಮೋನಿಯಂ ವಾದಕರಾಗಿ ನಿಪುಣರಾಗಿರುವ ಇವರು ಪ್ರಸಿದ್ಧ ಹರಿದಾಸರಾದ ದಿ.ಮಲ್ಪೆ ಶಂಕರನಾರಾಯಣ ಸಾಮಗ, ದಿ.ಗೋವಿಂದದಾಸರು, ದಿ.ಶೇಣಿಗೋಪಾಲಕೃಷ್ಣ ಭಟ್ಟರು, ಬಿ.ಸಿ ರಾವ್, ಅಂಬಾತನಯ ಮುದ್ರಾಡಿ ಮುಂತಾದವರ ಹರಿಕತೆಗೆ ಹಾರ್ಮೋನಿಯಂ ವಾದಕರಾಗಿ ಸಾಥಿ ನೀಡಿದ್ದಾರೆ.

ಉಡುಪಿ ಇಂದ್ರಾಣಿಯ ಆದಿಶಕ್ತಿ ಸ್ಥಾನಿಕ ಬ್ರಾಹ್ಮಣ ಮಹಿಳಾ ಭಜನಾ ಮಂಡಳಿಯ ಸದಸ್ಯರಿಗೆ, ಉಡುಪಿ ಶಾರದಾ ಕಲ್ಯಾಣ ಮಂಟಪದ ಮಹಿಳಾ ಭಜನಾ ಮಂಡಳಿಯವರಿಗೆ ಹಾಗೂ ಆಸಕ್ತರಿಗೆ ದಾಸರ ಪದಗಳನ್ನು ಹಾಡುವ ತರಬೇತಿ ನೀಡಿದ್ದಾರೆ.

ಕಲಾ ಜೀವನದ ಜೊತೆಗೆ ಇವರು ಸಮಾಜ ಸೇವೆಯನ್ನು ಮಾಡಿದ್ದಾರೆ. ಅಧ್ಯಾಪಕ ವೃತ್ತಿಯಲ್ಲಿ ಇರುವಾಗ ನಿದ್ರಾವಸ್ಥೆಯಲ್ಲಿದ್ದ ನೀಲಾವರ ಸಹಕಾರಿ ಸಂಘವನ್ನು ಊರ ಹಿರಿಯರ ಪ್ರೋತ್ಸಾಹದಿಂದ ಬಡಿದೆಬ್ಬಿಸಿ ಕಾರ್ಯಶೀಲಗೊಳಿಸಿದ್ದಾರೆ.

1952ರಿಂದ 1972ರವರೆಗೆ 20 ವರ್ಷಗಳ ಕಾಲ ಅದರ ಗೌರವ ಕಾರ್ಯದರ್ಶಿಯಾಗಿ ದುಡಿದಿದ್ದಾರೆ. ನೀಲಾವರ, ಆರೂರು, ಚೇರ್ಕಾಡಿ ಮುಂತಾದ ಗ್ರಾಮಗಳ ಜನತೆಗೆ ಇದರಿಂದ ಅನುಕೂಲವಾಗುವಂತೆ ಮಾಡಿದ್ದಾರೆ. ಇವರು ಇದರಿಂದ ನಿವೃತ್ತಿ ಹೊಂದುವ ಕಾಲಕ್ಕೆ ಈ ಸಂಸ್ಥೆಯನ್ನು ಬ್ರಹ್ಮಾವರ ವ್ಯವಸಾಯ ಸೇವಾ ಸಹಕಾರಿ ಸಂಘಕ್ಕೆ ವಿಲೀನಗೊಳಿಸಿದರು. ಈ ಸಂದರ್ಭದಲ್ಲಿ ತಾವೂ ಸಾಕಷ್ಟು ಕೈ ಸುಟ್ಟುಕೊಂಡರೂ ವಿಚಲಿತರಾಗದೆ ಬಂದ ಕಷ್ಟಗಳನ್ನು ಎದುರಿಸಿ ಅಜಾತಶತ್ರು ಎನಿಸಿದರು.

ಇಷ್ಟು ದೀರ್ಘಕಾಲದ ಸೇವೆಗಾಗಿ ಇವರಿಗೆ ಸಂದ ಪ್ರಶಸ್ತಿ, ಸನ್ಮಾನಗಳೂ ಅಪಾರ. ಎಲ್ಲಕ್ಕೂ ಶಿಖರ ಪ್ರಾಯವೆಂಬಂತೆ 2001ರಲ್ಲಿ ಯಕ್ಷಗಾನ ಕ್ಷೇತ್ರದ ಇವರ ಸಾಧನೆಯನ್ನು ಪರಿಗಣಿಸಿ ಕರ್ನಾಟಕ ಸರಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. 1999ರಲ್ಲಿ ಧಾರವಾಡ ಗಮಕ ಸಮ್ಮೇಳನದಲ್ಲಿ, 2001ರಲ್ಲಿ ಸುರತ್ಕಲ್ ಗಮಕ ಸಮ್ಮೇಳನದಲ್ಲಿ, 1997ರಲ್ಲಿ ಕಾಸರಗೋಡು ಗಮಕ ಸಮ್ಮೇಳನದಲ್ಲಿ, 2006 ರಲ್ಲಿ ಸಂಗೀತಕ್ಕಾಗಿ ಹರಿಹರಪುರ ಮಠದಲ್ಲಿ, ಯಕ್ಷಗಾನ ಕಲಾ ಕೇಂದ್ರದಲ್ಲಿ, ಅಜಪುರ ಕರ್ನಾಟಕ ಸಂಘದ ಸಂಗೀತೋತ್ಸವ ಕಾರ್ಯಕ್ರಮದಲ್ಲಿ, ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದಲ್ಲಿ ಮೊದಲಾದೆಡೆ ಸನ್ಮಾನವನ್ನು ಸ್ವೀಕರಿಸಿದ್ದಾರೆ. ಇತ್ತೀಚೆಗೆ "ಬಣ್ಣದ ಸಕ್ಕಟ್ಟು" ಪ್ರಶಸ್ತಿ ನೀಡಿ ಗೌರವಾದರಗಳೊಂದಿಗೆ ಸಮ್ಮಾನಿಸಲಾಗಿದೆ.

ಶ್ರೀ ಲಕ್ಷ್ಮೀನಾರಾಯಣಯ್ಯನವರು ಶ್ರೀಮಂತರಲ್ಲ, ಆದರೆ ಹೃದಯ ಶ್ರೀಮಂತರು, ಕಲಾ ಸಂಪನ್ನರು. ಕಲಾವಿದರಾದ ಶ್ರೀಯುತರು ಕಲೆಯ ಜಾಲದಲ್ಲಿ ತನ್ನ ಬದುಕಿನ ಕಷ್ಟವನ್ನು ಮರೆತಿದ್ದಾರೆ. ಇವರ ಅಗಲುವಿಕೆ ಕಲಾಕ್ಷೇತ್ರಕ್ಕೆ ತುಂಬಲಾರದ ನಷ್ಟ.

ಕಲಾ ಕ್ಷೇತ್ರದಲ್ಲಿ ಕಲಾ ತಪಸ್ವಿಯಾಗಿ ಸೇವೆಗೈದು ಅಗಲಿದ ನೀಲಾವರದವರ ಸಾಧನೆಗಳಿಂದ ಪ್ರೇರಿತರಾಗಿ ಅವರ ಶಿಷ್ಯರು, ಯುವ ಪೀಳಿಗೆಯವರು ನಡೆದಲ್ಲಿ ಆ ಕಲಾಮಾತೆ ಪ್ರಸನ್ನಳಾದಾಳು. ಅವರ ಆದರ್ಶ ಗುಣಗಳು ಮುಂದಿನವರಿಗೆ ದಾರಿ ದೀಪವಾಗಿರಲಿ ಎಂದು ಹಾರೈಸೋಣ.

**-ನೀಲಾವರ ಪಟ್ಟಾಭಿರಾಮರಾವ್**


## ಶ್ರದ್ಧಾಂಜಲಿ

**ಖ್ಯಾತ ಗಮಕ ಕಲಾವಿದ, ಯಕ್ಷಗಾನ ಭಾಗವತ ಗುರು, ಕರ್ನಾಟಕ ಸಂಗೀತ ತಜ್ಞ ನೀಲಾವರ ಲಕ್ಷ್ಮೀನಾರಾಯಣಯ್ಯನವರು ನಿಧನ ಹೊಂದಿದ್ದಾರೆ. ಗಮಕ ಕಲೆಯನ್ನು ಜಿಲ್ಲೆಯಾದ್ಯಂತ ಆಸಕ್ತರಿಗೆ ಬೋಧಿಸುತ್ತಿದ್ದುದಲ್ಲದೆ ಅಲ್ಲಲ್ಲಿ ಸಂಘ ಸಂಸ್ಥೆಗಳ ಆಸಕ್ತರಿಗೆ ಕುಣಿತದ ಭಜನೆ, ದಾಸರ ಪದಗಳ ಹಾಡುವಿಕೆ ಮೊದಲಾದ ತರಬೇತಿಗಳನ್ನು ನೀಡುತ್ತಿದ್ದರು. ಡಾ। ಶಿವರಾಮ ಕಾರಂತರಿಂದ ಗುರುತಿಸಲ್ಪಟ್ಟ ಇವರು ತಮ್ಮ ಅಣ್ಣ ನೀಲಾವರ ರಾಮಕೃಷ್ಣಯ್ಯನವರ ಉತ್ತರಾಧಿಕಾರಿಗಳಾಗಿ ಉಡುಪಿಯ ಯಕ್ಷಗಾನ ಕೇಂದ್ರದಲ್ಲಿ ಭಾಗವತಿಕೆಯ ಗುರುಗಳಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೇ ಯಕ್ಷಗಾನ ಕೇಂದ್ರದ ತಂಡದೊಂದಿಗೆ ದೇಶ ವಿದೇಶಗಳಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ನೀಡಿದ ಕೀರ್ತಿ ಇವರದ್ದಾಗಿದೆ. ಉಡುಪಿಯ ಕುಂಜಿಬೆಟ್ಟಿನ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವಿನಂತಿಯಂತೆ ಶ್ರೀಶಾರದಾ ದೇವಸ್ಥಾನದಲ್ಲಿ ಹಲವು ವರ್ಷ ಪ್ರತೀ ತಿಂಗಳ ಎರಡನೇ ಶನಿವಾರ ಕಾವ್ಯ ವಾಚನ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟಿದ್ದಾರೆ. ಅಲ್ಲದೇ ಸಮಾಜ ಬಾಂಧವರಿಗೆ ಮತ್ತು ಶ್ರೀ ದೇವಸ್ಥಾನದ ಆಸುಪಾಸಿನ ಭಕ್ತರಿಗೆ ಭಜನೆ ತರಬೇತಿಯನ್ನೂ ನೀಡಿದ್ದಾರೆ.**

**ಮಂಗಳೂರು ಆಕಾಶವಾಣಿಯ 'ಬಿ' ಶ್ರೇಣಿಯ ಕಲಾವಿದರಾಗಿದ್ದ, ರಾಜ್ಯ ಪ್ರಶಸ್ತಿ ವಿಜೇತ ನಮ್ಮ ಸಮಾಜದ ಹಿರಿಯ ಚೇತನ ಲಕ್ಷ್ಮೀನಾರಾಯಣಯ್ಯರ ನಿಧನಕ್ಕೆ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಸಂತಾಪವನ್ನು ವ್ಯಕ್ತಪಡಿಸಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.**

## ನಿಧನ

### ಕ್ರೈಕುಡೆ ವೆಂಕಟರಾವ್



ಹಳೆಯಂಗಡಿ ಪಂಜ ಕ್ರೈಕುಡೆ ಕೆ ಎಸ್ ವೆಂಕಟರಾಯರು(86ವರ್ಷ) 13-12-2014ರಂದು ನಿಧನರಾದರು. ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಧರ್ಮದರ್ಶಿಗಳಾಗಿದ್ದ ಇವರು ಮೂಲ್ಕಿಯ 'ಕ್ಷೀರ ಸಾಗರ'ದ ನಿರ್ದೇಶಕರಾಗಿ ಹಳೆಯಂಗಡಿ ಪಿ ಸಿ ಎ ಬ್ಯಾಂಕ್‌ನ ನಿರ್ದೇಶಕರಾಗಿ, ಕೆಮ್ರಾಲ್ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾಗಿ ಸಾಮಾಜಿಕವಾಗಿ ತಮ್ಮನ್ನು ಗುರುತಿಸಿಕೊಂಡಿದ್ದ ಇವರಿಗೆ ಪಾವಂಜೆ ಶ್ರೀ ಜ್ಞಾನ ಶಕ್ತಿ ದೇವಸ್ಥಾನದ ವತಿಯಿಂದ 'ಪಾವಂಜೆ ಹರಿಭಟ್ ಪ್ರಶಸ್ತಿ' ಹಾಗೂ ಹಲವಾರು ಸಮ್ಮಾನ ಗೌರವಗಳು ಸಂದಿದ್ದವು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಆರು ಮಂದಿ ಪುತ್ರರು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ಕರ್ವಾಲು ಚಂದ್ರಶೇಖರರಾವ್

ಕಾರ್ಕಳ ಕರ್ವಾಲು ಕುಟುಂಬದ ಹಿರಿಯರಾದ ಕೆ ಚಂದ್ರಶೇಖರರಾವ್ (79ವರ್ಷ) ದಿನಾಂಕ 12-12-2014ರಂದು ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ಸುರೇಶ್ ರಾವ್

ಬಾರಕೂರು ಮಸ್ಕಿಬೈಲು ಸುರೇಶ್ ರಾವ್ (54) ತಾ.5-1-2015ರಂದು ನಿಧನ ಹೊಂದಿದರು. ಬ್ರಹ್ಮಾವರ ಪರಿಸರದಲ್ಲಿ ಕಳೆದ 30 ವರ್ಷಗಳಿಂದ ಕಾರ್ಪೋರೇಶನ್ ಬ್ಯಾಂಕ್‌ನ ನಿತ್ಯನಿಧಿ (ಪಿಗ್ಮಿ) ಸಂಗ್ರಾಹಕರಾಗಿದ್ದ ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

### ರವೀಂದ್ರರಾವ್

ಮುಂಬಯಿಯಲ್ಲಿ ವಾಸ್ತವ್ಯದಲ್ಲಿದ್ದ ದಿ। ಅಂಬಲಪಾಡಿ ಆನಂದರಾಯರ ಪುತ್ರ ರವೀಂದ್ರ ರಾವ್ (57) ಅವರು ದಿನಾಂಕ 10-01-2015ರಂದು ಹೃದಯಾಘಾತದಿಂದ ನಿಧನರಾದರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಉದ್ಯೋಗಿಯಾಗಿದ್ದ ಮೃತರು ಪತ್ನಿ, ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಆಗಲಿದ್ದಾರೆ.

## ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ, ಮುಂಬಯಿಯ ಅಮೃತ ಮಹೋತ್ಸವಾಚರಣೆ

■...2ನೇ ಪುಟದಿಂದ

ಮತ್ತು ಇಂದ್ರಾಣಿ ರಾವ್ ಸಂಘ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ಕಿರು ಪರಿಚಯ ಮಾಡಿಕೊಟ್ಟರು.

ಸನ್ಮಾನಕ್ಕೆ ಉತ್ತರವಿತ್ತ ಸಂಘದ ಪ್ರತಿನಿಧಿಗಳು, ತಮ್ಮ ಸಂಘ ಸಂಸ್ಥೆಗಳ ಕಾರ್ಯಕ್ಷೇತ್ರಗಳ ಪರಿಚಯವನ್ನು ಮಾಡಿಕೊಟ್ಟು ಸುಬ್ರಹ್ಮಣ್ಯ ಸಂಘಕ್ಕೆ ಶುಭ ಕೋರಿದರು.

ಅಮೃತ ಮಹೋತ್ಸವದ ಸ್ಮರಣ ಸಂಚಿಕೆಯನ್ನು ಮುಖ್ಯ ಅತಿಥಿ ಹೊಸಬೆಟ್ಟು ಸುರೇಶ್ ಬಿಡುಗಡೆಗೊಳಿಸಿದರು. ಅವರ ಸನ್ಮಾನ ಪತ್ರವನ್ನು ಶ್ರೀ ವೈ. ವಿ. ಮಧುಸೂದನ್ ರಾವ್ ವಾಚಿಸಿದರು. ನ್ಯಾಯಮೂರ್ತಿ ಶ್ರೀಎಚ್.ಸುರೇಶ್ ಸಂದರ್ಭೋಚಿತವಾಗಿ ಮಾತನಾಡಿದರು.

ಅಮೃತ ಮಹೋತ್ಸವ ಸಮಿತಿಯ ಕಾರ್ಯದರ್ಶಿ ಶ್ರೀ ಸದಾಶಿವ ರಾವ್ ಧನ್ಯವಾದ ಸಮರ್ಪಣೆ ಮಾಡಿದರು. ಶ್ರೀಮತಿಯರಾದ ಪ್ರೇಮಾ ರಾವ್, ಅಂಜನಾ ರಾವ್, ಅನುರಾಧಾ ರಾವ್ ಕಾರ್ಯಕ್ರಮ ನಿರೂಪಣೆಗೈದರು.

ಕೊನೆಗೆ ನೃತ್ಯ ವಿದ್ಯಾ ನಿಲಯ ಭಾಂಡುಪ್‌ನ ಶ್ರೀಮತಿ ಶೈಲಜಾ ಮಧುಸೂದನ್ ಅವರ ನಿರ್ದೇಶನದಲ್ಲಿ 'ಭಕ್ತ ಪ್ರಹ್ಲಾದ' ನೃತ್ಯ ರೂಪಕ ಪ್ರದರ್ಶನಗೊಂಡು ನೆರೆದವರ ಮೆಚ್ಚುಗೆಯನ್ನು ಪಡೆಯಿತು. ಪ್ರೀತಿ ಭೋಜನದ ಏರ್ಪಾಡು ಮಾಡಲಾಗಿತ್ತು.

## ಕಾಂತಮಂಗಲದಲ್ಲಿ ಕಿರುಷಷ್ಠಿ

ಸುಳ್ಯ ತಾಲೂಕು ಅಜ್ಜಾವರ ಕಾಂತಮಂಗಲದ ಶ್ರೀ ಸುಬ್ರಮಣ್ಯ ದೇವಸ್ಥಾನದಲ್ಲಿ ತಾ। 27.12.2014 ರಂದು ಕಿರಿಷಷ್ಠಿ ಸಮಾರಾಧನೆಯು ಆಶ್ಲೇಷಾ ಬಲಿ ಸೇವೆಯೊಂದಿಗೆ ನೆರವೇರಿತು. ಬಳಿಕ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳಿಂದ ಧಾರ್ಮಿಕ ಉಪನ್ಯಾಸ ನೆರವೇರಿತು. ಮಧ್ಯಾಹ್ನ ಮಹಾಪೂಜೆಯ ನಂತರ ಅನ್ನಸಂತರ್ಪಣೆ ನೆರವೇರಿತು.

# ಪಿರಮಿಡ್ ದೇಶದೆಡೆಗೆ ಒಂದು ಪಯಣ

**ಪ್ರವಾಸ ಕಥನ**

“ದೇಶ ಸುತ್ತಿ ನೋಡು ಕೋಶ ಓದಿ ನೋಡು” ಎಂಬ ಮಾತಿದೆ. ನನಗೆ ಮತ್ತು ನನ್ನ ಯಜಮಾನರಿಗೆ ಪ್ರವಾಸ ಎಂದರೆ ಅಚ್ಚು ಮೆಚ್ಚು. ಈಗಾಗಲೇ ಹಲವಾರು ದೇಶಗಳನ್ನು ಸುತ್ತಿ ಅದರ ಸೊಗಸನ್ನು ಕಂಡಿದ್ದೇವೆ. ನಾವೇಕೆ ಪಿರಮಿಡ್‌ಗಳ ನಾಡಾದ ಈಜಿಪ್ಟ್‌ಗೆ ತೆರಳಬಾರದು? ಎಂದು ಯೋಚಿಸಿ ಅದರ ಕಡೆಗೆ ತಾ.07–10–2014ರಂದು ನಮ್ಮ ಪ್ರಯಾಣ ಆರಂಭಿಸಿದೆವು.

ನಾವು ಮಂಗಳೂರು–ಬೆಂಗಳೂರು–ದೋಹಾ–ಈಜಿಪ್ಟ್ ಮಾರ್ಗವಾಗಿ ವಿಮಾನದ ಮೂಲಕ ಕೈರೋವನ್ನು 18 ಮಂದಿ ಲಯನ್ಸ್ ಸದಸ್ಯರೊಂದಿಗೆ ತಲುಪಿದೆವು. ನಮ್ಮ ಪ್ರಯಾಣ 4857ಕಿ.ಮೀ. ಕತಾರ್ ಏರ್‌ಲೈನ್ಸ್‌ನಲ್ಲಿ ಕೈರೋ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತಲುಪಿದೆವು. ಆ ದಿನ ವಿಶ್ರಾಂತಿ ಪಡೆದು ಅಲ್ಲಿನ ಪಿರಮಿಡ್, ಮ್ಯೂಸಿಯಂ ನೋಡ ಹೊರಟೆವು. 230.4ಮೀ ಎತ್ತರ ಪಿರಮಿಡ್‌ಗಳ ಆ ಸೌಂದರ್ಯ ನೋಡಲು ಎರಡು ಕಣ್ಣುಗಳು ಸಾಲದು. Lime Stoneಗಳಿಂದ ಅದನ್ನು ನಿರ್ಮಿಸಿದ್ದಾರೆ.

ಪಿರಮಿಡ್‌ಗಳ ಒಳಗೆ ಮ್ಯೂಸಿಯಂನಲ್ಲಿ ರಾಜ, ರಾಣಿ, ಮಕ್ಕಳ, ಮೊಮ್ಮಕ್ಕಳ ಮಮ್ಮಿಗಳನ್ನು ಇಟ್ಟಿದ್ದಾರೆ. ಸಾವಿರಾರು ಹಳೆಯ ಮಮ್ಮಿಗಳು ಇವೆ. ಮಮ್ಮಿ ಎಂದರೆ ಹೆಣ. ಸತ್ತ ವ್ಯಕ್ತಿಯ ಸುತ್ತ ಅವರಿಗೆ ಪ್ರಿಯವಾದ ವಸ್ತುಗಳನ್ನು ಇಟ್ಟು ಹಾಳಾಗದಂತೆ ರಾಸಾಯನಿಕ ವಸ್ತುಗಳನ್ನು ಲೇಪಿಸುತ್ತಾರೆ. ಜೊತೆಗೆ 5000 ಹಳೆಯ ರಾಜರ ಮಮ್ಮಿಗಳನ್ನು ಮತ್ತು 3000 ಮೊಸಳೆಗಳ ಮಮ್ಮಿಗಳನ್ನು ಮಾಡಿಟ್ಟಿದ್ದಾರೆ.

ಅಲ್ಲಿನ ಮರುಭೂಮಿಯು ನೋಡಲು ಸುಂದರವಾಗಿ 10,01,450 Sq.Km. ವಿಸ್ತೀರ್ಣತೆಯನ್ನು ಹೊಂದಿದೆ. ಅಲ್ಲಿನ ಹಣ ಶಿಯರ್ ಪೌಂಡ್. ಅವರ 100 ಪೌಂಡ್ ಅಂದರೆ ಭಾರತದ 863.16 ರೂಪಾಯಿಗಳು. ಅದು ಹೆಚ್ಚಾಗಿ ಮುಸಲ್ಮಾನರು ಇರುವ ಪ್ರದೇಶ. ಉಳಿದ ಧರ್ಮೀಯರನ್ನೂ ಒಳಗೊಂಡಿದೆ. 8.3 ಲಕ್ಷ ಜನಸಂಖ್ಯೆಯನ್ನು ಹೊಂದಿದೆ. ಅಲ್ಲಿನ ಕಟ್ಟಡಗಳು ಎತ್ತರವಾಗಿವೆ. ಸೊಗಸಾದ ಹೋಟೆಲುಗಳ ವ್ಯವಸ್ಥೆಗಳಿವೆ. ನಾವು ಮೆರಿಡಿಯನ್ ಹೋಟೇಲಿನಲ್ಲಿ ವಿಶ್ರಾಂತಿ ಪಡೆದೆವು.

ಮರುದಿನ ನಮ್ಮ ಪ್ರಯಾಣ ವಿಮಾನದ ಮೂಲಕ ಅಸ್ವಾನ್ ಸಿಟಿಗೆ. ಜೊತೆಗೆ ನೈಲ್ ನದಿ ಒಳಹರಿವು ನೋಡಿದೆವು. ಆ ಮರುಭೂಮಿ ಪ್ರದೇಶಕ್ಕೆ ನೈಲ್ ನದಿ ವಿಶಿಷ್ಟವಾದ ವರಪ್ರಸಾದದಂತೆ ಹರಿಯುತ್ತಿತ್ತು. ತೆರೆದ ಬಾಗಿಲುಗಳನ್ನು ನಿರ್ಮಿಸಿ ಹಡಗುಗಳನ್ನು ಹೊಂದಿ ಪ್ರವಾಸಿಗರನ್ನು ಆಕರ್ಷಿಸುತ್ತಿತ್ತು.

ರಾತ್ರಿ ನಮ್ಮ ವಿಶ್ರಾಂತಿ ಹಡಗಿನಲ್ಲಿ. ನಿಜವಾಗಿಯೂ ಮರೆಯಲಾಗದ ಸವಿನೆನಪಾಗಿದೆ. “Royal Esadora” ಎಂಬ ಹಡಗಿನಲ್ಲಿ ಊಟ, ವಿಶ್ರಾಂತಿ. ಅದನ್ನು ನೋಡುವಾಗ ನಾವು ಹಡಗಿನಲ್ಲಿದ್ದೇವೆ ಎಂದು ಎಣಿಸಲಾಗದು. 5 Star ಮಾದರಿಯ ಹೋಟೆಲ್ ಕೆಳ ಅಂತಸ್ತಿನಲ್ಲಿ. ಮೇಲಂತಸ್ತಿನಲ್ಲಿ ವಿಶ್ರಾಂತಿ ಕೊಠಡಿ. ಅದರೊಂದಿಗೆ ಅಂಗಡಿಗಳು, ಹಣ ವಿನಿಮಯ ಕೇಂದ್ರ, ಹೀಗೆ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಹಡಗು. ಅದರೊಂದಿಗೆ ನೃತ್ಯಗಾರ್ಡನ್, ಈಜುಕೊಳ ಎಲ್ಲಾ ಸೌಲಭ್ಯಗಳನ್ನು ಹೊಂದಿದೆ.

ನಂತರ ರಾತ್ರಿ ಅಲ್ಲಿನ ಸಾಂಸ್ಕೃತಿಕತೆಯನ್ನೂ ತಿಳಿಸುವ ಬ್ಯಾಲೆ, ಬೆಲ್ಲಿ ನೃತ್ಯಗಳು ತುಂಬಾ ಅದ್ಭುತವಾಗಿತ್ತು. ನಾವು ತಂಗಿದ್ದ ಹಡಗಿನಲ್ಲಿ ಯು.ಕೆ., ಜರ್ಮನಿ ದೇಶದವರು ಜೊತೆಗಿದ್ದರು. ಮೂರುದಿನ ಅದೇ ಸೊಗಸಾದ ಹಡಗಿನಲ್ಲಿ ಪ್ರಯಾಣ. ಹಗಲಿಡೀ ಹಡಗು ಸಂಚರಿಸುತ್ತದೆ. ರಾತ್ರಿ 8 ಗಂಟೆಯ ಬಳಿಕ ವಿಶ್ರಾಂತಿ ಹೊಂದುತ್ತದೆ. ಮರುದಿನ ಕುದುರೆಗಾಡಿಯಲ್ಲಿ ಪ್ರಯಾಣಿಸಿದ್ದೆವು. ಪ್ರಕೃತಿ ಸೊಗಸನ್ನು, ಅಲ್ಲಿನ ಸುಂದರವಾದ ಖರ್ಜೂರ ಗಿಡಗಳನ್ನು, ದೋಣಿ ಮೂಲಕ ಹಾಡುತ್ತಾ ನರ್ತಿಸುತ್ತಾ ಚಾರಿತ್ರಿಕ, ಸ್ಥಳಗಳನ್ನು ಕಂಡೆವು.

ಅಲ್ಲಿನ ಕಲ್ಲಿನ ಅತೀ ಎತ್ತರವಾದ ಸ್ತಂಭಗಳು ವಿಶೇಷವಾದ ಸೌಂದರ್ಯವನ್ನು ಹೊಂದಿತ್ತು. ಅದರ ಸುಂದರ ಕೆತ್ತನೆ, ವಿನ್ಯಾಸ ಕಲೆಗೆ ಮಾರು ಹೋಗಲೇಬೇಕು. ಅಲ್ಲಿನ ವರ್ಣನೆ ಹೇಳಿದಷ್ಟು ಮುಗಿಯದು. ಬೇಸರದ ವಿಚಾರ ಅಂದರೆ ಭೂಕಂಪ, ಅನೇಕ ಪ್ರಕೃತಿ ವಿಕೋಪಗಳಿಗೆ ಕೆಲವು ಕಟ್ಟಡ, ಕೆತ್ತನೆಗಳು ಹಾನಿಯಾಗಿವೆ. ಆದರೂ ಅದು ತನ್ನ ಸೌಂದರ್ಯವನ್ನು ಹೊಂದಿರುವುದು ವಿಶೇಷವಾಗಿದೆ. 3 ಸಾವಿರ ವರ್ಷ ಹಿಂದಿನ ಅಲ್ಲಿನ ಜನರ ಜೀವನ ಶೈಲಿ, ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ ವಿಚಾರವನ್ನು ಬೃಹದಾಕಾರದ ಕಲ್ಲಿನಲ್ಲಿ ಅತೀ ಸೂಕ್ಷ್ಮ ಕೆತ್ತನೆ ಮೂಲಕ ಕೆತ್ತಿದ್ದಾರೆ. ಅಲ್ಲಿನ ಸ್ತ್ರೀಯರ ಸೌಂದರ್ಯ, ಅಲಂಕಾರ ವಿಶಿಷ್ಟವಾಗಿದೆ. ಊಟದಲ್ಲಿ ಕಾಯಿಮೆಣಸೂ, ಕೆಂಪು ಮೆಣಸನ್ನು ಬಳಸದೆ ಕಾಳು ಮೆಣಸನ್ನು ಬಳಸಿ ಖಾದ್ಯಗಳನ್ನು ತಯಾರಿಸುತ್ತಾರೆ. ಪಪ್ಪಾಯಿ ಗಿಡದಿಂದ ಪೇಪರ್ ತಯಾರಿಸಿ ಅದರಲ್ಲಿ ಚಿತ್ರಕಲೆಯನ್ನೂ ರಚಿಸಿ ಮಾರಾಟ ಮಾಡುತ್ತಾರೆ. Edfu Temple ಸಂದರ್ಶನ. ಹೀಗೆ Esna ಎಂಬಲ್ಲಿ ಹಡಗು ತಂಗಿತು.

ತಾರೀಕು 13–10–2014ರಂದು ನಮ್ಮ ಪ್ರಯಾಣ Laxorಗೆ. ಅಲ್ಲಿನ ರಾಜನ ವಿಶೇಷ ವ್ಯಕ್ತಿತ್ವ ತಿಳಿಸುತ್ತೇನೆ. ಏನೆಂದರೆ ಪರಜೇಸ್ ಎಂಬ ರಾಜ 98 ವರ್ಷ ಬಾಳಿದ. ಆತನ ಅರಮನೆ 4 ಸಾವಿರ ವರ್ಷ ಹಳೆಯದು. ಆತನ ಮಮ್ಮಿ ಮೂಸಿಯಂನಲ್ಲಿದೆ. ಅವರು 80 ಮದುವೆ ಆಗಿದ್ದಾರೆ. ಜೊತೆಗೆ ಇಬ್ಬರು ಆತನ ಸುಂದರ ಪುತ್ರಿಯರನ್ನೇ ವಿವಾಹವಾಗಿದ್ದಾರೆ. ಅವನಿಗೆ 220 ಮೊಮ್ಮಕ್ಕಳು ಇದ್ದರಂತೆ. “ಕಣ್ಣಿಗೆ ಮುದವನ್ನು ಮನಸ್ಸಿಗೆ ಆನಂದವನ್ನು” ನೀಡುವ ದೊಡ್ಡ ಕಂಬಗಳು, ಕೆತ್ತನೆ ಒಳಗೊಂಡ ಮೇಲ್ ಚಾವಣಿಗಳು, ನಮ್ಮ ಭಾರತೀಯರ ಹಲವಾರು ಪ್ರಮುಖ ದೇವಾಲಯಗಳನ್ನು ನೆನಪಿಸುತ್ತದೆ.

Giza Pyramids ಹಲವಾರು ಪಿರಮಿಡ್‌ಗಳನ್ನು ನೋಡಬೇಕಾದರೆ ಟಿಕೆಟ್ ಖರೀದಿಸಲೇ ಬೇಕು. ಎಷ್ಟೇ ದೇಶ ಸುತ್ತಿದ್ದರೂ ಪುನಃ ಮರಳಿ ಗೂಡಿಗೆ ಬರಲೇಬೇಕು ತಾನೇ. ಹಾಗೆಯೇ ನಾವು 14–10–2014ರಂದು Laxor ವಿಮಾನ ನಿಲ್ದಾಣದಿಂದ ದೋಹಾ, ಬೆಂಗಳೂರು ಮಂಗಳೂರು ಮಾರ್ಗವಾಗಿ ನಮ್ಮ ಗೂಡು ತಲುಪಿದೆವು.

ನಮ್ಮ ಸುಖ ಪ್ರಯಾಣ ಮನಸ್ಸಿಗೆ ಅತೀ ಸಂತಸವನ್ನು ನೀಡಿತು. ಅಲ್ಲಿನ ಪ್ರಕೃತಿ ವೀಕ್ಷಣೆ, ಹಡಗಿನ ಪ್ರಯಾಣ ಕಣ್ಣಿಗೆ ಆನಂದವನ್ನು ನೀಡುತ್ತದೆ. ಎತ್ತರವಾದ ಪಿರಮಿಡ್‌ನ ಆಕಾರ ಈಗಲೂ ಮರುಕಳಿಸುತ್ತದೆ.

ಯಾರಿಗಾದರೂ ಪ್ರವಾಸಕ್ಕೆ ಅವಕಾಶ ದೊರತರೆ ಅದನ್ನು ನಿರಾಕರಿಸದೆ ಪ್ರದೇಶ, ನಾಡು ದೇಶ ಸುತ್ತಿ ಅದರ ಆನಂದವನ್ನು ಅನುಭವಿಸಿರಿ. ಈಜಿಪ್ಟ್‌ನ ಸವಿ ನೆನಪು ನನ್ನಲ್ಲಿ ಇರುವಂತೆಯೇ ನಿಮ್ಮಲ್ಲಿಯೂ ಚಿರನೂತನವಾಗಿರುತ್ತದೆ.

**–ಶ್ರೀಮತಿ ಕನವಲ್ಲಿ ಹರ್ಷ ಕುಮಾರ್**

## ಶಿಕ್ಷಣ ಮತ್ತು ತರಬೇತಿ ವೇದಿಕೆ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು**
**ಶ್ರೀಶಾರದಾ ಮಂಟಪ, ಉಡುಪಿ-2**

**ಎಸ್.ಎಸ್.ಎಲ್.ಸಿ. (ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ)**
**ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ ಶಿಬಿರ**
**CCE ಮಾದರಿಯಲ್ಲಿ (80:20) ಪರೀಕ್ಷಾ ತರಬೇತಿ ಕಾರ್ಯಕ್ರಮ**

**ತಾ.15-03-2015 (ರವಿವಾರ) ಸ್ಥಳ : ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ.**
**ಸಮಯ : ಬೆಳಿಗ್ಗೆ 9-30ರಿಂದ ಸಂಜೆ 4-30ರ ವರೆಗೆ**

ಶಿಬಿರದಲ್ಲಿ ಹಿಂದಿನ ಪಬ್ಲಿಕ್ ಪರೀಕ್ಷೆ ಮತ್ತು ಇತ್ತೀಚಿನ ಪೂರ್ವಸಿದ್ಧತಾ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ವಿತರಣೆ ಮತ್ತು ಚರ್ಚೆ, ಗಣಿತ ಮತ್ತು ವಿಜ್ಞಾನ ವಿಷಯಗಳ ಬಗ್ಗೆ ವಿವರವಾಗಿ ಹಾಗೂ ಇತರ ಎಲ್ಲಾ ವಿಷಯಗಳ ಕುರಿತು ಸಂಕ್ಷಿಪ್ತವಾಗಿ ಅನುಭವಿ ಶಿಕ್ಷಕರಿಂದ ಮಾಹಿತಿಗಳನ್ನು ನೀಡಲಾಗುವುದು.

ವಿ.ಸೂ. :
1) ವಿದ್ಯಾರ್ಥಿಗಳು ಪಠ್ಯಪುಸ್ತಕಗಳು ಮತ್ತು ಬರವಣಿಗೆ ಸಾಮಗ್ರಿಗಳೊಂದಿಗೆ ಹಾಜರಿರಬೇಕು.
2) ಶಿಬಿರಕ್ಕೆ ಯಾವುದೇ ಶುಲ್ಕ ಇರುವುದಿಲ್ಲ.
3) ಶಿಬಿರದಲ್ಲಿ ಊಟ, ಉಪಾಹಾರಗಳ ವ್ಯವಸ್ಥೆ ಇರುತ್ತದೆ.
4) ಆಸಕ್ತ ವಿದ್ಯಾರ್ಥಿಗಳು ವೇದಿಕೆಯ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ (ಫೋನ್ : 9449254846) ಇವರಲ್ಲಿ ನೋಂದಾಯಿಸಬೇಕಾಗಿ ವಿನಂತಿ.

***ನಮ್ಮ ಸಮಾಜದ ವಿದ್ಯಾರ್ಥಿಗಳು ಈ ಶಿಬಿರದ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಕೋರಲಾಗಿದೆ.***

ಡಾ। ರವೀಂದ್ರನಾಥರಾವ್ ವೈ. (ಅಧ್ಯಕ್ಷರು) | ಪ್ರಭಾಕರ ಭಂಡಿ (ಸಂಚಾಲಕರು)

## ನೂತನ ವಧು-ವರರಿಗೆ ಶುಭಾಶಯಗಳು



**ಶ್ರೀ ಅಜಿತ್ ರಾವ್ ಮತ್ತು ಶ್ರೀಮತಿ ಅಂಜಲಿ**

*ಹೊಸ ಬಾಳಿನ ಹೊಸಿಲಂ ನಿಂತಿರುವ...*
*ನವ ಜೋಡಿಗೆ.... ಶುಭವಾಗಲಿ....*

**ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಕುಂಜಿಬೆಟ್ಟು , ಉಡುಪಿ**
ಮತ್ತು
**ಶ್ರೀಶಾರದಾ ಬಳಗ, ಉಡುಪಿ**





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

Krishna Rao
Ph : 2520652
Mob. : 9902029048



KISHAN
Studio & Video



Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

ಮಕ್ಕಳಿಗಾಗಿ ಪುರಾಣ ಕಥೆ

# ಕ್ಷತ್ರಿಯ ಕೌಶಿಕ ಬ್ರಹ್ಮರ್ಷಿ ವಿಶ್ವಾಮಿತ್ರನಾದ

ಬ್ರಹ್ಮ ಮಾನಸ ಪುತ್ರನಾದ ಕುಶ ಎಂಬವನಿಗೆ ಕುಶಾಂಬ, ಕುಶನಾಭ, ಅದೂರ್ತರಜಸ್ಸು ಮತ್ತು ವಸು ಎಂಬ ನಾಲ್ವರು ಮಕ್ಕಳಿದ್ದರು. ಅವರಲ್ಲಿ ಮುಂದೆ ಕಲಹವಾಗಬಾರದೆಂದು ಕುಶ ಭೂಪಾಲನು ನಾಲ್ವರಿಗೆ ರಾಜ್ಯವನ್ನು ಬೇರೆ ಬೇರೆಯಾಗಿ ವಿಂಗಡಿಸಿ ಜವಾಬ್ದಾರಿ ಕೊಟ್ಟನು.

ಕುಶಾಂಬನು ಕೌಶಾಂಬಿಗೆ ಅಧಿಪತಿ ಯಾದರೆ ಕುಶನಾಭನು ಮಹೋದಯವನ್ನು ಆಳಿಕೊಂಡಿದ್ದನು. ಅದೂರ್ಥರಜಸ್ಸು ಧರ್ಮಾರಣ್ಯದಲ್ಲಿದ್ದರೆ ವಸುವು ಗಿರಿವ್ರಜದಲ್ಲಿದ್ದನು. ಕುಶನಾಭನ ಮಗನ ಹೆಸರು ಗಾದಿ. ಅವನ ಮಗನೇ ಕೌಶಿಕನು. ಕೌಶಿಕನನ್ನು "ಗಾದಿತನಯ" ಎಂದೂ ಕರೆದಿದ್ದಾರೆ. ಕೌಶಿಕನು ವೀರನಾಗಿದ್ದನು.ಒಮ್ಮೆ ಅಕ್ಷೋಹಿಣೀ ಸೇನೆಯೊಂದಿಗೆ ಕೌಶಿಕನು ಭೂ ಪ್ರದಕ್ಷಿಣೆಗಾಗಿ ಹೊರಟನು. ಅವರು ಅನೇಕ ದೇಶಗಳನ್ನು ದಾಟಿ ಕೊನೆಗೆ ವಸಿಷ್ಠರ ಆಶ್ರಮವಿರುವ ಸ್ಥಳಕ್ಕೆ ಬಂದರು. ಕೌಶಿಕನು ತನ್ನ ಸೈನ್ಯವನ್ನು ಹೊರದ್ವಾರದಲ್ಲಿಯೇ ನಿಲ್ಲಿಸಿ, ಆಶ್ರಮವನ್ನು ಪ್ರವೇಶಿಸಿದನು.

ವಸಿಷ್ಠರು ಬ್ರಹ್ಮರ್ಷಿಗಳಾಗಿದ್ದರು. ಅವರ ಆಶ್ರಮವು ಪ್ರಶಾಂತವಾದಂತಹ ಸ್ಥಳದಲ್ಲಿತ್ತು. ಈ ಆಶ್ರಮಕ್ಕೆ ದೇವರ್ಷಿಗಳೂ, ಬ್ರಹ್ಮರ್ಷಿಗಳೂ, ರಾಜರ್ಷಿಗಳೂ ಆಗಮಿಸುತ್ತಿದ್ದರು. ಅನೇಕ ಮಹರ್ಷಿಗಳು ಇಲ್ಲಿಯೇ ಇರುತ್ತಿದ್ದರು. ಈ ಸುಂದರ ವಸಿಷ್ಠಾಶ್ರಮದಲ್ಲಿ ಅನೇಕ ಸಾಧು–ಕ್ರೂರ ಮೃಗ ಪಕ್ಷಿಗಳು ಅನ್ಯೋನ್ಯತೆಯಿಂದ ಜೀವಿಸುತ್ತಿದ್ದವು.

ಪೂಜ್ಯರಾದ, ಸಪ್ತರ್ಷಿಗಳಲ್ಲಿ ಒಬ್ಬರಾದ ಬ್ರಹ್ಮ ಮಾನಸ ಪುತ್ರರಾದ ವಸಿಷ್ಠರನ್ನು ಕಂಡು ಕೌಶಿಕನು ಸಾಷ್ಟಾಂಗ ನಮನ ಸಲ್ಲಿಸಿದನು. ಮಹಾ ತಪಸ್ವಿಗಳಾದ ವಸಿಷ್ಠರು ರಾಕ್ಷಸರಿಂದ ಇಂದ್ರನನ್ನು ರಕ್ಷಿಸಿದವರು. ಅವರ ಪತ್ನಿ ಅರುಂಧತಿ ದೇವಹೂತಿಯ ಮಗಳು. ಜ್ಞಾನಿಗಳಾದ್ದರಿಂದ "ಬ್ರಹ್ಮರ್ಷಿ ವಸಿಷ್ಠ"ರೆಂದೇ ಪ್ರಸಿದ್ಧರಾಗಿದ್ದರು. ಅವರು ಕೌಶಿಕನನ್ನು ಕುಳ್ಳಿರಿಸಿ ಕುಶಲವನ್ನು ವಿಚಾರಿಸಿದರು. ಆಶ್ರಮದ ಆತಿಥ್ಯವನ್ನು ಸ್ವೀಕರಿಸಲು ಕೇಳಿದರು. ಕೌಶಿಕರಾಜನಿಗೆ ಸಂತಸವಾಯಿತು. ಆದರೆ ತನ್ನ ಸೈನ್ಯಕ್ಕೆ ಆತಿಥ್ಯ ಸಿಗಬಹುದೆಂದು ತಿಳಿದಿರಲಿಲ್ಲ.

ವಸಿಷ್ಠರು ಆಶ್ರಮದಲ್ಲಿದ್ದ ಕಾಮಧೇನು 'ಶಬಲೆ'ಗೆ ರಾಜಾ ಕೌಶಿಕ ಮತ್ತು ಆತನ ಸೈನಿಕರೆಲ್ಲರಿಗೂ ಮೃಷ್ಟಾಹ್ನ ಭೋಜನವನ್ನು ಕರುಣಿಸುವಂತೆ ಕೇಳಿಕೊಂಡರು. ಮರು ಕ್ಷಣದಲ್ಲಿ ಎಲ್ಲರಿಗೂ ಸುಗ್ರಾಸ ಭೋಜನವನ್ನು ಉಣಬಡಿಸಲಾಯಿತು. ವಿವಿಧ ಬಗೆಯ ಭಕ್ಷ್ಯಭೋಜ್ಯಗಳಿಂದ ಕೂಡಿದ ಊಟವನ್ನು ಸವಿದ ಎಲ್ಲರೂ ಸಂತೃಪ್ತರಾದರು.

ಕೇವಲ ಒಂದು ಹಸು ಇಷ್ಟೆಲ್ಲ ನೀಡಿತೇ ಎಂದು ಕೌಶಿಕನಿಗೆ ಆಶ್ಚರ್ಯ ಉಂಟಾಯಿತು. ಹಸುವನ್ನು ತಾನು ಪಡೆಯಬೇಕೆಂದು ದುರಾಸೆ ಕೌಶಿಕನಿಗೆ ಉಂಟಾಯಿತು. ವಸಿಷ್ಠರನ್ನು ಕಂಡು "ಮಹರ್ಷಿಗಳೇ ಈ ಹಸುವನ್ನು ನನಗೆ ನೀಡಿರಿ ಅದರ ಬದಲಿಗೆ ತಮಗೆ ಸಾವಿರಾರು ಗೋವುಗಳನ್ನು ನಿಮಗೆ ನೀಡುತ್ತೇನೆ" ಎಂದನು ಮತ್ತು ಆಶ್ರಮದ ಖರ್ಚಿಗೆ ಕೋಟಿಗಟ್ಟಲೆ ಹಣ ನೀಡುತ್ತೇನೆ ಎಂದರು. ಆದರೆ ವಸಿಷ್ಠರು "ಈ ಶಬಲೆ ನನಗೆ ದೇವತೆಗಳಿಂದ ನೀಡಲ್ಪಟ್ಟ ಉಡುಗೊರೆ, ನಿನಗೆ ನೀಡಲು ಸಾಧ್ಯವಿಲ್ಲ. ಮತ್ತು ಅದು ನನ್ನನ್ನು ಬಿಟ್ಟು ಎಲ್ಲಿಗೂ ಹೋಗುವುದಿಲ್ಲ" ಎಂದರು.

ಆದರೆ ಕೌಶಿಕನಿಗೆ ವಸಿಷ್ಠರು ಬೇಕೆಂದೇ ಕೊಡುವುದಿಲ್ಲ ಎಂದು ಹೇಳುತ್ತಾರೆ ಎಂದು ಅವರನ್ನು ನಿಂದಿಸಿದನು. ಬಲತ್ಕಾರದಿಂದ ಹಸುವನ್ನು ಎಳೆದೊಯ್ಯುತ್ತೇನೆ ಎಂದನು. "ನಿನಗೆ ಶಕ್ತಿಯಿದ್ದರೆ ಪ್ರಯತ್ನಿಸು" ಎಂದು ವಸಿಷ್ಠರು ತಿಳಿಸಿದರು. ಸೈನಿಕರಿಗೆ ಶಬಲೆಯನ್ನು ಕಟ್ಟಿ ತರಲು ಆಜ್ಞೆ ಮಾಡಿದನು. ಶಬಲೆಯು ಒಮ್ಮೆ ಮೈಕೊಡವಿತು. ಅದರ ಮೈಯಿಂದ ಸಾವಿರಾರು ಸೈನಿಕರು ಹೊರಬಂದರು. ಆ ಸೈನಿಕರು ಕೌಶಿಕನ ಸೈನಿಕರನ್ನು ಹೊಡೆದಟ್ಟಿದರು. ಕೌಶಿಕನು ತಪಸ್ಸು ಮಾಡಿ ಶಿವನ ಕರುಣೆ ಸಂಪಾದಿಸಿ ಆಶ್ರಮದ ಮೇಲೆ ಪ್ರಬಲವಾದ ಅಸ್ತ್ರವನ್ನು ಬಿಟ್ಟನು. ಆಶ್ರಮದಲ್ಲಿ ಎಲ್ಲ ಕಡೆ ಉರಿಯುತ್ತಿರುವ ಅಗ್ನಿ ಕಂಡ ವಸಿಷ್ಠರು ಎಲ್ಲರನ್ನು ಸಮಾಧಾನಪಡಿಸಿದರು. ನಂತರ ತಮ್ಮ "ಬ್ರಹ್ಮದಂಡ"ವನ್ನು ಎದುರಿಗಿಟ್ಟು ಕುಳಿತರು. ಬೆಂಕಿ ನಾಶವಾಯಿತು. ಕೌಶಿಕನ ಅಸ್ತ್ರವನ್ನು ಬ್ರಹ್ಮದಂಡ ನುಂಗಿಹಾಕಿತು. ಕೊನೆಗೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಮೂರು ಲೋಕದ ಜನರು ಹೆದರಿದರು. ಆದರೆ ವಸಿಷ್ಠರ ಬ್ರಹ್ಮದಂಡ ಅದನ್ನು ನುಂಗಿಹಾಕಿತು. ಆಗ ಕೌಶಿಕನಿಗೆ "ಬ್ರಹ್ಮಬಲ"ವೇ ನಿಜವಾದ ಬಲ ಅದರ ಮುಂದೆ "ಕ್ಷತ್ರಿಯಬಲ"ಕ್ಕೆ ಬೆಲೆಯಿಲ್ಲ. ಎಂಬ ಅರಿವುಂಟಾಯಿತು. ತಾನೂ ಸಹ ತಪಸ್ಸು ಮಾಡಿ ಬ್ರಹ್ಮಬಲವನ್ನು ಪಡೆಯಬೇಕೆಂಬ ಛಲವುಂಟಾಯಿತು. ಮುಂದೆ ದಕ್ಷಿಣಕ್ಕೆ ತೆರಳಿ ತಪಸ್ಸನ್ನು ಆಚರಿಸಿ ಬ್ರಹ್ಮದೇವನಿಂದ ರಾಜರ್ಷಿ, ಬ್ರಹ್ಮರ್ಷಿ ಎಂದು ಕರೆಸಿಕೊಂಡನು.

**–ಬಟ್ಟೆ ವಿನಾಯಕ, ಬಾರಕೂರು.**

## ವೈದ್ಯಕೀಯ ವೇದಿಕೆ–ಆರೋಗ್ಯ ಮಾಹಿತಿ

**ಡಾ। ವೈ. ಸುದರ್ಶನ ರಾವ್**



**ಪ್ರಶ್ನೆ: ಉಸಿರಾಡುವ ಗಾಳಿ ಹಾಗೂ ಆರೋಗ್ಯ**

ಮೊತ್ತ ಮೊದಲಿಗೆ ನಾವು ಉಸಿರಾಡುವ ಗಾಳಿಯಲ್ಲೇನಿದೆ ಎಂದು ಪರಿಶೀಲಿಸೋಣ. ಇದರಲ್ಲಿ ಶೇಕಡಾ 78ರಷ್ಟು ನೈಟ್ರೋಜನ್ ಎಂಬ ಅನಿಲ ಇದೆ. ನಂತರ ಶೇಕಡಾ 21ರಷ್ಟು ಆಮ್ಲಜನಕ ಇದೆ. ಶೇಕಡಾ 0.03ರಷ್ಟು ಕಾರ್ಬನ್‌ಮೊನಾಕ್ಸೈಡ್ ಇದೆ. ಉಳಿದ 'ಭಾಗದಲ್ಲಿ ಇತರ ಅನಿಲಗಳು, ಧೂಳು, ಹೊಗೆ ಹಾಗೂ ನೀರಾವಿ ಇದೆ. ಇವೆಲ್ಲದರಲ್ಲಿ ಆಮ್ಲಜನಕ ಎಲ್ಲಾ ಪ್ರಾಣಿಗಳಿಗೆ ಅತ್ಯಗತ್ಯವಾದದ್ದು. ಉಸಿರಿನ ಮೂಲಕ ಶ್ವಾಸಕೋಶಗಳ ಒಳಗೆ ಹೋದ ಗಾಳಿಯಲ್ಲಿರುವ ಆಮ್ಲಜನಕವನ್ನು ರಕ್ತಕ್ಕೆ ಹೀರಿಕೊಳ್ಳುವ ವ್ಯವಸ್ಥೆ ನಮ್ಮ ಶ್ವಾಸಕೋಶಗಳಲ್ಲಿದೆ. ಈ ಆಮ್ಲಜನಕವನ್ನು ನಮ್ಮ ದೇಹವು ಶಕ್ತಿಯ ಉತ್ಪಾದನೆಗೆ ಬಳಸಿಕೊಳ್ಳುತ್ತದೆ. ಅಮ್ಲಜನಕವಿಲ್ಲದೇ ನಾವು ಕೇವಲ ಮೂರರಿಂದ ಐದು ನಿಮಿಷಗಳ ಕಾಲಮಾತ್ರ ಬದುಕಿರಬಲ್ಲೆವು. ಹಾಗೆಯೇ ಕಾರ್ಬನ್ ಡೈಯಾಕ್ಸೈಡ್ ಎಂಬುದು ನಮ್ಮ ದೇಹದಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ಅನಿಲ. ಇದನ್ನು ದೇಹವು ಶ್ವಾಸಕೋಶದ ಮೂಲಕ ಉಸಿರಾಡಿ ಹೊರಗೆ ಬಿಡುವ ಗಾಳಿಯೊಂದಿಗೆ ಕಳಿಸಿಬಿಡುತ್ತದೆ. ವಾತಾವರಣದಲ್ಲಿರುವ ಆಮ್ಲಜನಕವು ಗಿಡಮರಗಳು ಆಹಾರವನ್ನು ತಯಾರಿಸುವ "ಫೋಟೋಸಿಂತೆಸಿಸ್" ಎಂಬ ಪ್ರಕ್ರಿಯೆಯಲ್ಲಿ ಹೊರಬರುವ ಉಪವಸ್ತುವಾಗಿದೆ. ಆಮ್ಲಜನಕವಿಲ್ಲದೆ ಪ್ರಾಣಿಗಳು ಜೀವಿಸಲಾರವಾದ್ದರಿಂದ ಅದನ್ನು ಪ್ರಾಣವಾಯುವೆಂದೂ ಕರೆಯುತ್ತಾರೆ.

ಎತ್ತರ ಪ್ರದೇಶಗಳ (ಪರ್ವತ) ಉಸಿರಾಡುವ ಗಾಳಿಯಲ್ಲಿ ಆಮ್ಲಜನಕದ ಸಾಂದ್ರತೆ ಕಡಿಮೆ ಇರುತ್ತದೆ. ಉಸಿರಾಡುವ ಗಾಳಿಯಲ್ಲಿ ಆಮ್ಲಜನಕದ ಅಂಶ ಕಡಿಮೆಯಾದಾಗ ಮೊದಲಿಗೆ ತಲೆನೋವು ಹಾಗೂ ಸುಸ್ತು ಕಾಣಿಸಿಕೊಳ್ಳುತ್ತದೆ. ಗಲಿಬಿಲಿಗೊಂಡಂತಹ ವರ್ತನೆ ಅವರಲ್ಲಿರಬಹುದು. ನಂತರ ಉಸಿರಾಟದ ವೇಗ ಹೆಚ್ಚುತ್ತದೆ ಹಾಗೂ ದಮ್ಮು ಕಾಣಿಸಿಕೊಳ್ಳಬಹುದು, ಇನ್ನೂ ಹೆಚ್ಚಿನ ಕೊರತೆಯಾದರೆ ಮತಿ ಕಳೆದುಕೊಳ್ಳಬಹುದು. ಹಾಗೂ ಸಾವು ಸಂಭವಿಸಬಹುದು. ಹಿಮಾಲಯದಂತಹಾ ಎತ್ತರ ಪ್ರದೇಶದಲ್ಲೇ ಜೀವಿಸುವವರ ದೇಹವು ವಾತಾವರಣದಲ್ಲಿ ಆಮ್ಲಜನಕ ಕಡಿಮೆ ಇರುವ ಪರಿಸ್ಥಿತಿಗೆ ಒಗ್ಗಿಕೊಂಡಿರುವುದರಿಂದ ಅವರಿಗೆ ಈ ಚಿಹ್ನೆಗಳು ಬರುವುದಿಲ್ಲ. ತಗ್ಗು ಪ್ರದೇಶಗಳಲ್ಲಿರುವವರು ಒಮ್ಮೆಲೇ ಎತ್ತರಪ್ರದೇಶಕ್ಕೆ ಹೋದಾಗ (ಉದಾ ಪರ್ವತಾರೋಹಣ) ಈ ಚಿಹ್ನೆಗಳು ಕಾಣಿಸಬಹುದು. ಕೃತಕವಾಗಿ ಆಮ್ಲಜನಕವನ್ನು ನೀಡುವುದು ಹಾಗೂ ಕೂಡಲೇ ತಗ್ಗು ಪ್ರದೇಶಕ್ಕೆ ಒಯ್ಯುವುದು ಇದಕ್ಕೆ ಚಿಕಿತ್ಸೆಯಾಗಿದೆ.

ಉಸಿರಾಡುವ ಗಾಳಿಯಲ್ಲಿ ಆಮ್ಲಜನಕದ ಕೊರತೆಯಾಗಿ ತೊಂದರೆಯಾಗುವುದು ಇಂತಹಾ ವಿಶಿಷ್ಟ ಭೌಗೋಳಿಕ 'ಪರಿಸರಕ್ಕೆ ಮೀಸಲಾಗಿದ್ದರೆ, ದಿನನಿತ್ಯದ ಪರಿಸ್ಥಿತಿಯಲ್ಲಿ ಉಸಿರಾಡುವ ಗಾಳಿಯಿಂದಾಗಿ ನಮ್ಮ ಆರೋಗ್ಯ ಏರುಪೇರಾಗಲು ಅತೀ ಸಾಮಾನ್ಯ ಕಾರಣವೇನೆಂದರೆ ಮಲಿನ ಗಾಳಿಯ ಸೇವನೆ. ನಾವು ಉಸಿರಾಡುವ ಗಾಳಿ ಮಲಿನವಾಗಲು ಮೊತ್ತಮೊದಲನೆಯ ಕಾರಣವೇನೆಂದರೆ ನಾವೇ ಉಸಿರಾಡಿ ಬಿಟ್ಟಗಾಳಿ! ಉಸಿರಾಡಿ ಬಿಟ್ಟ ಗಾಳಿಯ ಉಷ್ಣತೆ ಹೆಚ್ಚು, ಕಾರ್ಬನ್‌ಮೊನಾಕ್ಸೈಡ್ ಹಾಗೂ ಡಯಾಕ್ಸೈಡ್‌ನ ಸಾಂದ್ರತೆ ಹೆಚ್ಚು, ಆಮ್ಲಜನಕದ ಸಾಂದ್ರತೆ ಕಡಿಮೆ ಹಾಗೂ ಮುಖ್ಯವಾಗಿ ಅನೇಕ ಮೀಣಿಜೀವಿಗಳು ಅದರಲ್ಲಿರುತ್ತವೆ. ಹಾಗಾಗಿ ತುಂಬಾ ಜನರು ಸೇರಿರುವ ಕಡೆಯಲ್ಲಿ ಉಸಿರಾಡುವ ಗಾಳಿ ಮಲಿನವಾಗಿರುತ್ತದೆ ಹಾಗೂ ನಮಗೆ ಶ್ವಾಸಕೋಶದ ಮೂಲಕ ನಮ್ಮ ದೇಹವನ್ನು ಸೇರುವ ಮೀಣಿ ಜೀವಿಗಳಿಂದ ಬರುವ ಕಾಯಿಲೆಯ ಸಾಧ್ಯತೆ ಹೆಚ್ಚು.

ಉಸಿರಾಡುವ ಗಾಳಿಯಲ್ಲಿ ಧೂಳು ಹಾಗೂ ಹೊಗೆಯಿಂದಾಗಿ ಅಲರ್ಜಿ ಸಂಬಂಧಿತ ಕಾಯಿಲೆಗಳು ಬರುತ್ತದೆ. ಮೋಟಾರು ವಾಹನ ಹಾಗೂ ಫ್ಯಾಕ್ಟರಿಗಳಿಂದ ಹೊರ ಸೂಸುವ ಹೊಗೆಯಲ್ಲಿ ಕೇವಲ ಹೊಗೆ ಮಾತ್ರವಲ್ಲದೆ ಅದರಲ್ಲಿ ಅನೇಕ ಹಾನಿಕಾರಕ ರಾಸಾಯನಿಕಗಳಿರುತ್ತವೆ. ಈ ಗಾಳಿಯನ್ನು ಸತತವಾಗಿ ಸೇವಿಸುವುದರಿಂದ ಕೆಮ್ಮು ದಮ್ಮು ಅಸ್ತಮಾದಂತಹಾ ಕಾಯಿಲೆಗಳಲ್ಲದೆ ಶ್ವಾಸಕೋಶದ ಕ್ಯಾನ್ಸರ್ ಸಹಾ ಬರಬಹುದು. ಬೆಂಕಿ ಅನಾಹುತದಂತಹಾ ಸಂದರ್ಭದಲ್ಲಿ ಉಸಿರಾಡುವ ಗಾಳಿ ಬಿಸಿಯಾಗಿರುವುದರಿಂದ ಶ್ವಾಸನಾಳಗಳು ಸುಟ್ಟುಹೋಗುತ್ತವೆ. ಈ ಗಾಳಿಯಲ್ಲಿ ಕಾರ್ಬನ್‌ಮೊನಾಕ್ಸೈಡ್ ಜಾಸ್ತಿ ಇದ್ದು, ಇದರ ಸೇವನೆಯಿಂದ ಪ್ರಜ್ಞೆ ತಪ್ಪುತ್ತದೆ ಹಾಗೂ ಸಾವು ಸಂಭವಿಸಬಹುದು. ರಸ್ತೆಯಲ್ಲಿ ವಾಹನಗಳ ಓಡಾಟದಿಂದ ಏಳುವ, ಕಲ್ಲು ಕೋರೆಗಳು ಹಾಗೂ ಗಣಿಗಳಲ್ಲಿನ ಧೂಳನ್ನು ಸದಾ ಸೇವಿಸುವುದರಿಂದ ಅಲರ್ಜಿ, ಅಸ್ತಮ, ಹಾಗೂ ಕ್ಯಾನ್ಸರ್ ಖಾಯಿಲೆ ಬರಬಹುದು. ಕ್ಷಯ ರೋಗವು ಇಂತಹಾ ಮಲಿನ ಗಾಳಿಯನ್ನು ಸೇವಿಸುವವರಿಗೆ ಬರುವ ಸಾಧ್ಯತೆ ಹಲವು ಪಟ್ಟು ಹೆಚ್ಚು ಇದೆ. ಉಸಿರಾಡುವ ಗಾಳಿ ಪಟ್ಟಣ ಪ್ರದೇಶಗಳಲ್ಲಿ ಈ ಮೇಲೆ ಹೇಳಿದ ಕಾರಣಗಳಿಂದ ಹೆಚ್ಚು ಮಲಿನವಾಗುವುದರಿಂದ ಈ ಎಲ್ಲಾ ತೊಂದರೆಗಳನ್ನು ಪಟ್ಟಣ ಪ್ರದೇಶಗಳಲ್ಲಿ ಜೀವಿಸುವವರು ಅನುಭವಿಸುವುದು ಅನಿವಾರ್ಯವಾಗಿದೆ.

ನಾವು ಉಸಿರಾಡುವ ಗಾಳಿಯನ್ನು ಸ್ವಚ್ಛವಾಗಿಡುವುದು ಹೇಗೆ? ಮೊತ್ತ ಮೊದಲಿಗೆ ನಾವೆಲ್ಲರು ಸಾಂಘಿಕವಾಗಿ, ಅನಗತ್ಯವಾಗಿ ಧೂಳು ಹಾಗೂ ಹೊಗೆ ಎಬ್ಬಿಸುವುದನ್ನು ಕಡಿಮೆ ಮಾಡಬೇಕು. ತ್ಯಾಜ್ಯ ವಸ್ತುಗಳನ್ನು ಸುಟ್ಟು ವಿಲೇವಾರಿ ಮಾಡುವುದು ತಪ್ಪುಕ್ರಮ. ಇದರಿಂದ ಹೊಗೆ ಮಾತ್ರವಲ್ಲ, ಅದರಲ್ಲಿರುವ ಪ್ಲಾಸ್ಟಿಕ್‌ನಂತಹ ವಸ್ತುಗಳು ಸುಡುವಾಗ ಅನೇಕ ಹಾನಿಕಾರಕ ರಾಸಾಯನಿಕಗಳು ಗಾಳಿಯನ್ನು ಸೇರುತ್ತವೆ. ಮೋಟಾರು ವಾಹನಗಳನ್ನು ಸುಸ್ಥಿತಿಯಲ್ಲಿಟ್ಟು, ಹೊರಸೂಸುವ ಹೊಗೆಯನ್ನು ಕಾಲಕಾಲಕ್ಕೆ ಪರೀಕ್ಷಿಸಿ, ಹೊಗೆ ಹಾಗೂ ಇತರ ಹಾನಿಕಾರಕ ಅಂಶಗಳು ಕನಿಷ್ಠ ಮಟ್ಟದಲ್ಲಿರುವಂತೆ ನೋಡಿಕೊಳ್ಳಬೇಕು. ಫ್ಯಾಕ್ಟರಿಗಳಿಗೂ ಈ ಮಾತು ಅನ್ವಯಿಸುತ್ತದೆ. ಮರಗಳನ್ನು ಉಳಿಸುವುದು ಹಾಗೂ ಬೆಳೆಸುವುದು ಇನ್ನೊಂದು ಅತ್ಯುತ್ತಮ ಉಪಾಯ. ಈ ಪ್ರಪಂಚದಲ್ಲಿ ವಾತಾವರಣಕ್ಕೆ ಆಮ್ಲಜನಕವನ್ನು ಒದಗಿಸುವ ಏಕೈಕ ಮೂಲವೆಂದರೆ ಮರಗಿಡಗಳು ಮಾತ್ರವೆನ್ನುವುದನ್ನು ಯಾರೂ ಮರೆಯಬಾರದು. ಜನ ಜಂಗುಳಿ ಸೇರುವಲ್ಲಿ ಗಾಳಿಯ ಓಡಾಟ ಗರಿಷ್ಟ ಮಟ್ಟದಲ್ಲಿರುವಂತಹ ವ್ಯವಸ್ಥೆ ಮಾಡಿರಬೇಕು. ಕೋಣೆ ಅಥವಾ ಸಭಾಂಗಣದಲ್ಲಾದರೆ ಸಾಕಷ್ಟು ಕಿಟಕಿಗಳಿದ್ದು ಗಾಳಿಯ ಚಲಾವಣೆ ಸಾಕಷ್ಟಿರುವಂತೆ ನೋಡಿಕೊಳ್ಳಬೇಕು. ಪರ್ಯಾಯವಾಗಿ ಹವಾನಿಯಂತ್ರಕಗಳನ್ನು (airconditioner) ಬಳಸಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

## ಸಂಕ್ರಾಂತಿ ಶುಭಾಶಯಗಳು



ಎಲ್ಲ ಸಮಾಜ ಬಾಂಧವರಿಗೆ, ಶ್ರೀಶಾರದಾ ಪತ್ರಿಕೆಯ ಅಭಿಮಾನಿಗಳಿಗೆ, ಲೇಖಕರಿಗೆ ಹಾಗೂ ಪತ್ರಿಕೆಯಲ್ಲಿ ಜಾಹೀರಾತನ್ನು ನೀಡಿ ಸಹಕರಿಸಿದ ಎಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು.

-ಸಂಪಾದಕ ಮಂಡಳಿ

## ಬ್ರಹ್ಮೋಪದೇಶ

**ಅನಿಕೇತ್**

ಸುರತ್ಕಲ್ ಇಡ್ಯಾದ ಶ್ರೀ ಗೋಪಾಲಕೃಷ್ಣ ರಾವ್ ಹಾಗೂ ಶ್ರೀಮತಿ ಕವಿತಾ ದಂಪತಿಗಳ ಪುತ್ರ **ಅನಿಕೇತ್**‌ನ ಬ್ರಹ್ಮೋಪದೇಶವು ದಿನಾಂಕ 26-12-2014ರಂದು ಇಡ್ಯಾದ ಸ್ವಗೃಹ 'ಮಾನಸ'ದಲ್ಲಿ ನೆರವೇರಿತು.

## ಶುಭಜನನ

ಶ್ರೀ ವಾಸುದೇವ ರಾವ್ ಕುಂಜಾರುಗಿರಿ (ಶ್ರೀ ವೈ. ಅಚ್ಯುತ್ ರಾವ್ ಇವರ ಪುತ್ರ) ಮತ್ತು ಶ್ರೀಮತಿ ಮಾನಸಾ ದಂಪತಿಗಳಿಗೆ ದಿನಾಂಕ 08-01-2015ರಂದು ಹೆಣ್ಣುಶಿಶುವಿನ ಜನನ.

## ಗೃಹಪ್ರವೇಶ

ಶ್ರೀ ಶ್ರೀನಿವಾಸ ಯಚ್.ಬಿ ಮತ್ತು ಶ್ರೀಮತಿ ಜಯಶ್ರೀ ಶ್ರೀನಿವಾಸ್ ದಂಪತಿಗಳು ಪುತ್ತೂರು ತಾಲೂಕಿನ ಮಂಜಲ್ಪಡ್ಪು(ಬೊಳ್ವಾರ್ ಪೆಸ್) ಎಂಬಲ್ಲಿ ನಿರ್ಮಿಸಿದ ನೂತನ ಗೃಹ **'ಶ್ರೀರಕ್ಷಾ'** ಇದರ ಪ್ರವೇಶೋತ್ಸವವನ್ನು ದಿನಾಂಕ 09-01-2015ರಂದು ಬಂಧುಬಾಂಧವರೊಡಗೂಡಿ ನೆರವೇರಿಸಿದರು.

★★★

ಚಿಟ್ಪಾಡಿ ಶ್ರೀ ಸತೀಶ್ ರಾವ್ ಮತ್ತು ಶ್ರೀಮತಿ ಸುಕನ್ಯಾ ದಂಪತಿಗಳು ಉಡುಪಿಯ ಚಿಟ್ಪಾಡಿಯಲ್ಲಿ ನಿರ್ಮಿಸಿದ ನೂತನ ಗೃಹ **'ಸುಮಿರಸ'** ಇದರ ಪ್ರವೇಶೋತ್ಸವವನ್ನು ದಿನಾಂಕ 25-12-2014ರಂದು ಬಂಧುಬಾಂಧವರೊಡಗೂಡಿ ನೆರವೇರಿಸಿದರು.

## ವಿಳಾಸ ಬದಲಾವಣೆ

**Sri K. Umesh Rao**
Retd. Chief Engineer
"Laxmi Vallabha", Flat No.4,
Vibhudapriyanagar, Kunjibettu,
Udupi-576102.

## ಮಕರ ಮಾಸದ ವಿಶೇಷ ದಿನಗಳು

| | |
|---|---|
| 14-01-2015 | ಮಕರ ಸಂಕ್ರಮಣ, ಮೂಲಾ ನಕ್ಷತ್ರಾರಂಭ |
| 16-01-2015 | ಸರ್ವೈಕಾದಶೀ |
| 18-01-2015 | ಪ್ರದೋಷಃ |
| 20-01-2015 | ಅಮವಾಸ್ಯಾ |
| 24-01-2015 | ಶ್ರವಣಾ ನಕ್ಷತ್ರಾರಂಭ |
| 30-01-2015 | ಸರ್ವೈಕಾದಶೀ |
| 01-02-2015 | ಪ್ರದೋಷಃ |
| 03-02-2015 | ಪೂರ್ಣಿಮಾ |
| 06-02-2015 | ಧನಿಷ್ಠಾ ನಕ್ಷತ್ರಾರಂಭ |
| 07-02-2015 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-9.14ಕ್ಕೆ |
| 13-02-2015 | ಕುಂಭ ಸಂಕ್ರಮಣ |

## ಮಾಂಗಲ್ಯಂ ತಂತುನಾನೇನ ....

ನೆಡ್ಯಾಳ ಶ್ರೀ ಲಕ್ಷ್ಮೀಶ ಮತ್ತು ಶ್ರೀಮತಿ ಉಷಾ ಇವರ ಪುತ್ರ **ಅವಿನಾಶ್** ಹಾಗೂ ಉಡುಪಿ ಕುಕ್ಕಿಕಟ್ಟೆಯಲ್ಲಿ ವಾಸ್ತವ್ಯದಲ್ಲಿರುವ ಶ್ರೀ ವೈ. ಪ್ರಕಾಶ ಕುಮಾರ್ ಮತ್ತು ಶ್ರೀಮತಿ ಗಾಯತ್ರಿ ಇವರ ಪುತ್ರಿ **ಪವಿತ್ರ** ಇವರ ವಿವಾಹವು 25-12-2014ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಉಡುಪಿ ಬೈಲೂರು ದಿ। ಸದಾಶಿವರಾವ್ ಮತ್ತು ಶ್ರೀಮತಿ ಗೀತಾ ಇವರ ಪುತ್ರ **ಅಜಿತ್** ಹಾಗೂ ಕುಂದಾಪುರ ಬೆಳ್ವೆ ಅಬ್ಲಿಕಟ್ಟೆ ಶ್ರೀ ಚಂದ್ರಶೇಖರ ಹೆಬ್ಬಾರ ಮತ್ತು ಶ್ರೀಮತಿ ವಸಂತಿ ಹೆಬ್ಬಾರರ ಪುತ್ರಿ **ಅಂಜಲಿ** ಇವರ ವಿವಾಹವು 28-12-2014ರಂದು ಹೆಬ್ರಿ ಅನಂತ ಪದ್ಮನಾಭ ದೇವರ ಸನ್ನಿಧಿಯಲ್ಲಿ ನೆರವೇರಿತು.

★★★ ★★★

ಕುಕ್ಕೇಹಳ್ಳಿ ಶ್ರೀ ವಾಸುದೇವರಾವ್ ಮತ್ತು ಶ್ರೀಮತಿ ಶಾಂತಾ ಇವರ ಪುತ್ರ **ಸಚಿನ್** ಹಾಗೂ ಕಿನ್ನಿಮೂಲ್ಕಿ ಶ್ರೀ ಕೆ. ಪ್ರಕಾಶ್ ರಾವ್ ಮತ್ತು ಶ್ರೀಮತಿ ಜಯಂತಿ ಇವರ ಪುತ್ರಿ **ಸ್ವಾತಿ** ಇವರ ವಿವಾಹವು 17-12-2014ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಮಲ್ಲಮಾರು ದಿ। ಎಸ್. ಸುಬ್ರಹ್ಮಣ್ಯ ಶ್ಯಾನುಭೋಗ್ ಮತ್ತು ಶ್ರೀಮತಿ ಉಮಾ ಇವರ ಪುತ್ರ **ಸಂಕೇತ್** ಹಾಗೂ ಕುಂಜಾರುಗಿರಿ ಶ್ರೀ ಕೆ. ರವೀಂದ್ರ ರಾವ್ ಮತ್ತು ಶ್ರೀಮತಿ ರಜನಿ ಇವರ ಪುತ್ರಿ **ರಂಜಿತಾ** ಇವರ ವಿವಾಹವು 02-01-2015ರಂದು ಉಡುಪಿ ಕಿನ್ನಿಮೂಲ್ಕಿ ಶ್ರೀ ವೀರಭದ್ರ ಕಲಾಸಭಾಭವನ ದಲ್ಲಿ ನೆರವೇರಿತು.

★★★ ★★★

ಉಡುಪಿ ಕುಕ್ಕಿಕಟ್ಟೆ ಶ್ರೀ ವಿಷ್ಣುಮೂರ್ತಿ ರಾವ್ ಮತ್ತು ಶ್ರೀಮತಿ ಶೋಭಾ ಇವರ ಪುತ್ರ **ಪವನ್ ಕುಮಾರ್** ಹಾಗೂ ಪುತ್ತೂರು ಭಟ್ರಪಾಡಿ ವೇದಮೂರ್ತಿ ಸೂರ್ಯ ನಾರಾಯಣ ಭಟ್ ಮತ್ತು ಶ್ರೀಮತಿ ಪೂರ್ಣಿಮಾ ಇವರ ಪುತ್ರಿ **ಪವಿತ್ರ** ಇವರ ವಿವಾಹವು 09-01-2015ರಂದು ಪುತ್ತೂರು ಶ್ರೀ ಮಹಾಲಿಂಗೇಶ್ವರ ಸಭಾಭವನದಲ್ಲಿ ನೆರವೇರಿತು.

★★★ ★★★

ಅಲೆವೂರು ಶ್ರೀ ಶ್ಯಾಮರಾವ್ ಮತ್ತು ಶ್ರೀಮತಿ ಸಾವಿತ್ರಿ ಇವರ ಪುತ್ರ **ನೀರಜ್** ಹಾಗೂ ಶ್ರೀ ಐ ಕೆ ಸಂದೇಶ್ ಮತ್ತು ಶ್ರೀಮತಿ ಸುಪ್ರಭ ಇವರ ಪುತ್ರಿ **ನೇಹಾ** ಇವರ ವಿವಾಹವು 11-01-2015ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಮತ್ತು ಶ್ರೀ ಚಿಟ್ಪಾಡಿ ಮೋಹನರಾಯರ ಪುತ್ರ **ತಿಲಕ್** ಹಾಗೂ ಶ್ರೀಮತಿ ಮತ್ತು ಶ್ರೀ ನಿಧಿಮುಂಡ ಶ್ರೀಪತಿರಾವ್ ಇವರ ಪುತ್ರಿ **ಚೈತನ್ಯಾ** ಇವರ ವಿವಾಹವು 12-01-2015ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಶಾರದ್ವತ ಯಾಗ ಮಂಟಪದಲ್ಲಿ ನೆರವೇರಿತು.

★★★ ★★★

ಬಂಟಕಲ್ಲು ಹೇರೂರು ಶ್ರೀ ಅರವಿಂದ್ ಶ್ಯಾನುಭಾಗ್ ಮತ್ತು ಶ್ರೀಮತಿ ಮಂಜುಳಾ ಇವರ ಪುತ್ರ **ರೂಪೇಶ್** ಹಾಗೂ ನಿಟ್ಟೆ ಕೆಮ್ಮಣ್ಣು ಕೆ ಪ್ರಕಾಶ್ ರಾವ್ ಮತ್ತು ಶ್ರೀಮತಿ ಮೀರಾ ಇವರ ಪುತ್ರಿ **ಅಂಕಿತಾ** ಇವರ ವಿವಾಹವು 12-01-2015ರಂದು ನಿಟ್ಟೆ ಕೆಮ್ಮಣ್ಣು ಶ್ರೀ ದುರ್ಗಾಪರಮೇಶ್ವರೀ ದೇವಳದ ಸಭಾಭವನದಲ್ಲಿ ನೆರವೇರಿತು.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ | : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ | : **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ | : **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.07-02-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.24-01-2015 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.18-01-2015 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀ ಸುಬ್ರಹ್ಮಣ್ಯ ಸಭಾದ 105ನೇ ವಾರ್ಷಿಕೋತ್ಸವ



ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇದರ 105ನೇ ವಾರ್ಷಿಕೋತ್ಸವವನ್ನು 21-12-2014ರಂದು ವಿಜ್ರಂಭಣೆಯಿಂದ ಆಚರಿಸಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್‌ರವರು ಉಪಾಧ್ಯಕ್ಷರಾದ ಶ್ರೀ ಎಂ. ಆರ್. ವಾಸುದೇವ, ಡಾ ಎ.ಪಿ. ಕೃಷ್ಣ ಸೇರಿದಂತೆ ಶ್ರೀ ಸಭಾದ ಪದಾಧಿಕಾರಿಗಳು ಮತ್ತು ಸದಸ್ಯರ ಉಪಸ್ಥಿತಿಯಲ್ಲಿ ದೀಪ ಪ್ರಜ್ವಲನ ಹಾಗೂ ಶ್ರೀ ಸತ್ಯನಾರಾಯಣ ಪೂಜೆಯ ಪ್ರಾರ್ಥನೆಯನ್ನು ನೆರವೇರಿಸಿದರು. ಸಾಮೂಹಿಕ ಶಂಕರಾಚಾರ್ಯ ಅಷ್ಟೋತ್ತರ ಹಾಗೂ ಲಲಿತ ಸಹಸ್ರನಾಮ ಪಾರಾಯಣದ ನಂತರ ಆಶುಭಾಷಣ, ಜಾನಪದ, ಭಾವಗೀತೆ ಸ್ಪರ್ಧೆ ನಡೆಯಿತು. ನಂತರ ನಡೆದ ಸರ್ವ ಸದಸ್ಯರ ಮಹಾಸಭೆಯು ಅಧ್ಯಕ್ಷರ ಸ್ವಾಗತದೊಂದಿಗೆ ಆರಂಭವಾಯಿತು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್‌ರಾವ್ ಬೆಳ್ಳೆ ನೀಡಿದ 2013-14ರ ಆಡಳಿತ ವರದಿಗೆ ಹಾಗೂ ಮುಂದಿನ ವರ್ಷದ ಕಾರ್ಯ ಯೋಜನೆಗಳಿಗೆ ಸದಸ್ಯರ ಅದ್ಭುತ ಬೆಂಬಲ ವ್ಯಕ್ತವಾಯಿತು. 2013-14 ಪರಿಶೋಧಿತ ಲೆಕ್ಕಪತ್ರ, ಆಡಿಟ್ ವರದಿ, 2014-2015ರ ಅಂದಾಜು ಆಯವ್ಯಯ ಪಟ್ಟಿಯನ್ನು ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಮಂಡಿಸಿದರು. ಅದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಶ್ರೀ ನಾಗರಾಜ ಶರ್ಮರನ್ನು ಮುಂದಿನ ವರ್ಷದ ಲೆಕ್ಕ ಪರಿಶೋಧಕರಾಗಿ ನೇಮಿಸಲಾಯಿತು. ಶ್ರೀ ಜಗನ್ನಾಥ್ ರಾವ್ ಮತ್ತು ಶ್ರೀಮತಿ ಲಲಿತಾ ದಂಪತಿಗಳು ಶ್ರೀಸತ್ಯನಾರಾಯಣ ಪೂಜೆ ಹಾಗೂ ಮಂಗಳಾರತಿ ನೆರವೇರಿಸಿದರು. ಭೋಜನದ ನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವೈಯಕ್ತಿಕ ನೃತ್ಯಗಳು, ಶ್ರೀಮತಿ ಅನುರಾಧ ರಾವ್ ನಿರ್ದೇಶನದ ಪುರುಷ ಹಾಗೂ ಮಹಿಳಾ ತಂಡಗಳ ನೃತ್ಯವನ್ನು ಪ್ರದರ್ಶಿಸಲಾಯಿತು. ಮಹಿಳಾ ವೇದಿಕೆಯ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಕುಸುಮ ನವೀನ ಕುಮಾರ್ ಕಾರ್ಯಕ್ರಮ ಸಂಯೋಜಿಸಿದರೆ, ಯುವ ವೇದಿಕೆಯ ಶ್ರೀ ಸುರೇಶ್ ಕಡಬ ಕಾರ್ಯಕ್ರಮ ನಿರ್ವಹಿಸಿದರು. ಬಹುಮಾನ ವಿತರಣೆ, ಧನ್ಯವಾದ ಸಮರ್ಪಣೆ ಮತ್ತು ರಾಷ್ಟ್ರ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಚಿತ್ರ : ಶ್ರೀ ರಘುವೀರ್ ಪೆರ್ಡೂರು — ವರದಿ: ಶ್ರೀ ಪಿ.ಶ್ರೀಕಾಂತ್ ರಾವ್




ಎಮ್. ದೇವಾನಂದ್ ಭಟ್
Cell : 9845644556
9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

